ಶಾಲಾ ಶಿಕ್ಷಣ ಇಲಾಖೆ

ಶೈಕ್ಷಣಿಕ ಬಲವರ್ಧನೆ ವರ್ಷ 2024-25

# ಕರ್ನಾಟಕ ಪಬ್ಲಿಕ್ ಸ್ಕೂಲ್ ತೆರ್ನಮಕ್ಕಿ

ನನ್ನ ಹೆಮ್ಮೆಯ ಕನ್ನಡ

ಕನ್ನಡವೇ ಸತ್ಯ ಕನ್ನಡವೇ ನಿತ್ಯ

# ಎಸ್.ಎಸ್.ಎಲ್.ಸಿ ೨೦೨೪-೨೫





## 10ನೇ ತರಗತಿ
## ರಾಜ್ಯ ಮಟ್ಟದ
## ಪೂರ್ವ ಸಿದ್ಧತಾ
## ಪರೀಕ್ಷೆ 2024-25
## ಮಾದರಿ ಉತ್ತರ
## ಸೂಚಿ

ಪ್ರಥಮ ಭಾಷೆ ಕನ್ನಡ

ಗುಡ್ಡಪ್ಪ.ಎಂ.ಎಚ್ ಸಹ ಶಿಕ್ಷಕರು
ಕರ್ನಾಟಕ ಪಬ್ಲಿಕ್ ಸ್ಕೂಲ್ ತೆರ್ನಮಕ್ಕಿ
8105599103

## ಕರ್ನಾಟಕ ಶಾಲಾ ಪರೀಕ್ಷಾ ಮತ್ತು ಮೌಲ್ಯ ನಿರ್ಣಯ ಮಂಡಲಿ

**KARNATAKA SCHOOL EXAMINATION AND ASSESSMENT BOARD**

# ರಾಜ್ಯಮಟ್ಟದ ಎಸ್.ಎಸ್.ಎಲ್.ಸಿ ಪೂರ್ವ ಸಿದ್ಧತಾ ಪರೀಕ್ಷೆ–2025

# STATE LEVEL SSLC PREPARATORY EXAMINATION-2025

## ವಿಷಯ : ಪ್ರಥಮ ಭಾಷೆ – ಕನ್ನಡ

## Subject : First Language — KANNADA

ದಿನಾಂಕ : 25/02/2025 ವಿಷಯ ಸಂಕೇತ : 01K

ಸಮಯ : 3 ಗಂಟೆ 15 ನಿಮಿಷ ಗರಿಷ್ಠ ಅಂಕಗಳು : 100

**ಮೌಲ್ಯಮಾಪನ ಸೂಚಿ (ಮಾದರಿ ಉತ್ತರ)**

---

**I.** ಈ ಕೆಳಗಿನ ಪ್ರಶ್ನೆಗಳಿಗೆ ಅಥವಾ ಅಪೂರ್ಣ ಹೇಳಿಕೆಗಳಿಗೆ ನಾಲ್ಕು ಆಯ್ಕೆಗಳನ್ನು ಕೊಡಲಾಗಿದೆ. ಅವುಗಳಲ್ಲಿ ಹೆಚ್ಚು ಸೂಕ್ತವಾದ ಉತ್ತರವನ್ನು ಆರಿಸಿ, ಕ್ರಮಾಕ್ಷರದೊಂದಿಗೆ ಬರೆಯಿರಿ. **6*1=6**

1. ಕನ್ನಡ ವರ್ಣಮಾಲೆಯಲ್ಲಿರುವ ಅನುನಾಸಿಕಾಕ್ಷರಗಳ ಸಂಖ್ಯೆ.

   (ಎ) ೨೫ (ಬಿ) ೦೯

   (ಸಿ) ೦೫ (ಡಿ) ೧೦

2. 'ಮೈದೋರು' ಪದವು ಈ ಸಂಧಿಗೆ ಉದಾಹರಣೆಯಾಗಿದೆ.

   (ಎ) ಆದೇಶ ಸಂಧಿ (ಬಿ) ಆಗಮ ಸಂಧಿ

   (ಸಿ) ಗುಣ ಸಂಧಿ (ಡಿ) ಯಣ್ ಸಂಧಿ

3. ಒಂದು ಅಭಿಪ್ರಾಯದ ವಿವರಣೆ ಮುಂದೆ ತಿಳಿಸಿದಂತೆ ಇದೆ ಎಂದು ತೋರಿಸುವ ಸಂದರ್ಭದಲ್ಲಿ ಈ ಚಿಹ್ನೆಯನ್ನು ಬಳಸಲಾಗುತ್ತದೆ.

   (ಎ) ಪೂರ್ಣವಿರಾಮ (ಬಿ) ವಿವರಣಾತ್ಮಕ

   (ಸಿ) ಭಾವಸೂಚಕ (ಡಿ) ಪ್ರಶ್ನಾರ್ಥಕ

4. 'ಮೆಲ್ವಾತು' ಪದವು ಈ ಸಮಾಸಕ್ಕೆ ಸೇರಿದೆ.

   (ಎ) ತತ್ಪುರುಷ ಸಮಾಸ (ಬಿ) ಅಂಶಿ ಸಮಾಸ

   (ಸಿ) ಕ್ರಿಯಾ ಸಮಾಸ (ಡಿ) ಕರ್ಮಧಾರಯ ಸಮಾಸ

5. 'ಅತ್ತಣಿಂ' ಪದವು ಈ ವಿಭಕ್ತಿ ಪ್ರತ್ಯಯ.

   (ಎ) ಪ್ರಥಮಾ (ಬಿ) ತೃತೀಯಾ

   (ಸಿ) ಪಂಚಮೀ (ಡಿ) ಸಪ್ತಮೀ

6. ಒಂದು ಅಥವಾ ಅನೇಕ ವಾಕ್ಯಗಳು ಒಂದು ಪ್ರಧಾನ ವಾಕ್ಯಕ್ಕೆ ಅಧೀನಗಳಾಗಿದ್ದರೆ ಅದು

   (ಎ) ಮಿಶ್ರವಾಕ್ಯ (ಬಿ) ಸಾಮಾನ್ಯವಾಕ್ಯ

   (ಸಿ) ಸಂಯೋಜಿತವಾಕ್ಯ (ಡಿ) ಸಂಯುಕ್ತವಾಕ್ಯ

**II.** ಕೆಳಗಿನ ಪ್ರಶ್ನೆಗಳಿಗೆ ಮೊದಲೆರಡು ಪದಗಳಿಗಿರುವ ಸಂಬಂಧದಂತೆ ಮೂರನೆಯ ಪದಕ್ಕೆ ಸರಿಹೊಂದುವ ಸಂಬಂಧೀ ಪದವನ್ನು ಬರೆಯಿರಿ. **4*1=4**

7. ಪರ್ವತ : ರೂಢನಾಮ : : ಸಹದೇವ: ಅಂಕಿತನಾಮ

8. ಮೊತ್ತಮೊದಲು : ದ್ವಿರುಕ್ತಿ : : ಸತಿಪತಿ : ಜೋಡುನುಡಿ

9. ಕಾರ್ಯ : ಕಜ್ಜ : : ಯಶ : : ಜಸ

10. ಚೆನ್ನಾಗಿ : ಸಾಮಾನ್ಯಾರ್ಥಕಾವ್ಯಯ : : ಅಯ್ಯೋ : ಭಾವಸೂಚಕಾವ್ಯಯ

---

**III. ಈ ಕೆಳಗಿನ ಪ್ರಶ್ನೆಗಳಿಗೆ ಪ್ರತಿಯೊಂದಕ್ಕೂ ಒಂದೊಂದು ವಾಕ್ಯದಲ್ಲಿ ಉತ್ತರಿಸಿ.** **7*1=7**

**11. ಭಾಷೆ ಯಾವುದಕ್ಕೆ ಸಾಧನವಾಗಿದೆ?**

❖ ನಮ್ಮ ಸುತ್ತಮುತ್ತಲಿನವರೊಡನೆ ವ್ಯವಹರಿಸುವುದಕ್ಕೆ ಹಾಗೂ ವಿಚಾರ ವಿನಿಮಯ ಮಾಡುವುದಕ್ಕೆ ಭಾಷೆ ಒಂದು ಅಮೂಲ್ಯ ಸಾಧನವಾಗಿದೆ.

**12. ವಚನಕಾರರಿಗೆ ಯಾವುದು ದೇವರಾಗಿತ್ತು?**

❖ ವಚನಕಾರರಿಗೆ ಅವರವರ ಪ್ರಜ್ಞೆಯೇ ದೇವರಾಗಿತ್ತು.

**13. ಗಡಿ ಪ್ರದೇಶಗಳಲ್ಲಿ "ಬ್ಲಾಕ್ ಔಟ್" ನಿಯಮವನ್ನು ಏತಕ್ಕಾಗಿ ಪಾಲಿಸಲಾಗುತ್ತದೆ?**

❖ ಗಡಿ ಪ್ರದೇಶಗಳಲ್ಲಿ ವಿಮಾನ ದಾಳಿಯಿಂದ ರಕ್ಷಿಸಿಕೊಳ್ಳಲು "ಬ್ಲಾಕ್ ಔಟ್" ನಿಯಮಪಾಲಿಸಲಾಗುತ್ತಿದೆ.

**14. ಕಾಶ್ಯಪಿ ವಿದ್ಯಾಭ್ಯಾಸಕ್ಕಾಗಿ ತನ್ನ ಮಕ್ಕಳನ್ನು ಯಾರ ಬಳಿಗೆ ಕಳುಹಿಸಿದಳು?**

❖ ಕಾಶ್ಯಪಿ ವಿದ್ಯಾಭ್ಯಾಸಕ್ಕಾಗಿ ತನ್ನ ಮಕ್ಕಳನ್ನು ತನ್ನ ಅಣ್ಣನಾದ ಸೂರ್ಯಮಿತ್ರನ ಬಳಿಗೆ ಕಳುಹಿಸಿದಳು.

**15. ಹಕ್ಕಿಯ ಕಣ್ಣುಗಳು ಯಾವುವು?**

❖ ಸೂರ್ಯ ಚಂದ್ರರು ಹಕ್ಕಿಯ ಕಣುಗ್ಣಳು.

**16. ದ್ರೋಣನು ಪರಶುರಾಮರಲ್ಲಿಗೆ ಏಕೆ ಬಂದನು?**

❖ ದ್ರೋಣನು ಪರಶುರಾಮರಲ್ಲಿಗೆ ದ್ರವ್ಯವನ್ನು (ಸಂಪತ್ತು/ಹಣ) ಬೇಡುವುದಕ್ಕಾಗಿ ಬಂದನು.

**17. ಕ್ರಿಯಾ ಸ್ವಾತಂತ್ರ್ಯ ಎಂದರೇನು?**

❖ ಕ್ರಿಯಾ ಸ್ವಾತಂತ್ರ್ಯವೆಂದರೆ, ತನಗೆ ಇಷ್ಟ ಬಂದ ಕೆಲಸ ಮಾಡಲು ವ್ಯಕ್ತಿಗೆ ಅವಕಾಶವಿರುವುದು. ಅದು ಔಪಚಾರಿಕವಾಗಿದ್ದರೆ ಸಾಲದು, ವಾಸ್ತವಿಕವಾಗಿ ಕೂಡ ಜಾರಿಯಲ್ಲಿರಬೇಕು.

---

**IV. ಕೆಳಗಿನ ಪ್ರಶ್ನೆಗಳಿಗೆ ಮೂರು / ನಾಲ್ಕು ವಾಕ್ಯಗಳಲ್ಲಿ ಉತ್ತರ ಬರೆಯಿರಿ.** **10*2=20**

**18. ಕನ್ನಡ ಭಾಷೆ ಹದಗೊಂಡದ್ದು ಹೇಗೆ?**

❖ ಅನೇಕ ಕವಿಗಳು ಕನ್ನಡ ಅಭಿವೃದ್ಧಿ ಹೊಂದಬೇಕಾದರೆ ಕನ್ನಡ ಪದಗಳ ಬಳಕೆ ಹೆಚ್ಚಾಗಬೇಕೆಂದು ಸಾರಿದ್ದಾರೆ. ಅಂಥವರ ವಾಣಿಯಿಂದ ಕನ್ನಡದ ವೀಣೆ ಮೃದು ಮಧುರವಾಗಿ ಮಿಡಿಯಿತು. ಮುಂದೆ ಬಸವೇಶ್ವರ, ಅಲ್ಲಮಪ್ರಭುಗಳಂತಹ ಶರಣವರೇಣ್ಯರು, ಚಾಮರಸ, ಕುಮಾರವ್ಯಾಸರಂತಹ ಕವಿಪುಂಗವರು, ಪುರಂದರದಾಸ, ಕನಕದಾಸರಂತಹ ದಾಸ ಶ್ರೇಷ್ಠರು ಸುಲಭ ಮಾರ್ಗವನ್ನೇ ತುಳಿದರು. ತಮ್ಮ ತಮ್ಮ ಅನುಭವಸಾರವನ್ನು ಸುಲಭವೂ ಸುಂದರವೂ ಸಹಜವೂ ಆದ ಮಾತುಗಳಿಂದ ಹೃದಯ ಮುಟ್ಟುವಂತೆ ಅಭಿವ್ಯಕ್ತಪಡಿಸಿದರು. ಹೀಗೆ ಕನ್ನಡ ಭಾಷೆ ಹದಗೊಂಡಿತು.

---

**19. ವಚನಕಾರರ ದೃಷ್ಟಿಯಲ್ಲಿ ಅರಿವು ಎಂದರೆ ಏನು? ವಿವರಿಸಿ.**

❖ ವಚನಕಾರರ ದೃಷ್ಟಿಯಲ್ಲಿ ನಡೆ–ನುಡಿಗಳ ಸಮನ್ವಯವೇ ಅರಿವು. ಅಂದರೆ ತನ್ನಷ್ಟಕ್ಕೆ ತಾನು ಇರುವ ಕೇವಲ ತಿಳಿವಳಿಕೆ, ಜ್ಞಾನ ಮಾತ್ರ ಅಲ್ಲ; ಅದು ಕ್ರಿಯೆಯ ಅನುಭವದಿಂದ ಒಡಮೂಡುವುದು. ಅದು ಕೇಳಿ ತಿಳಿದಿದ್ದಲ್ಲ. ಕ್ರಿಯೆಯಲ್ಲಿ ಮೂಡಿದ ತಿಳಿವಳಿಕೆ, ಅದು ತರ್ಕವಲ್ಲ. ನಡೆಯಿಂದ ನುಡಿ ಹುಟ್ಟಿದರೆ ಅದು ಅರಿವು.

---

**20. ಮುದುಕಿಯು ರಾಹಿಲನ ಬಳಿ ಯುದ್ಧದ ಬಗ್ಗೆ ತಿರಸ್ಕಾರದಿಂದ ನುಡಿದ ಮಾತುಗಳಾವುವು?**

❖ "ನೋಡಪ್ಪಾ, ನಾನು ಈ ಊರಿಗೆ ಬಂದು ಐವತ್ತು ವರ್ಷಗಳಾದರೂ ಆಗಿರಬಹುದು. ಮದುವೆಯಾಗಿ ನವ ವಧುವಾಗಿ ಈ ಊರನ್ನು ಪ್ರವೇಶಿಸಿದೆ.ಕೆಲವು ಕಾಲ ನೆಮ್ಮದಿಯಿಂದಲೇ ಇದ್ದೆವು. ಜಮೀನು ಆಸ್ತಿ ನಮಗೆ ಸಾಕಾಗುವಷ್ಟಿತ್ತು. ಈಗಲೂ ಇದೆಯೆನ್ನು, ಆದರೆ ನೆಮ್ಮದಿಯಿಂದ ಬದುಕಲು ಈ ಜನ ಬಿಡಬೇಕಲ್ಲ ? ಯುದ್ಧವಂತೆ, ಯುದ್ಧ!" ತಿರಸ್ಕಾರದಿಂದ ನುಡಿದಳು ಮುದುಕಿ.

---

**21. ಲಕ್ಷ್ಮಣನು ಅಣ್ಣನನ್ನು ಹೇಗೆ ಸಂತೈಸಿದನು?**

❖ ಸೀತಾಪಹರಣದ ಅನಂತರ ಶೋಕತಪ್ತನಾದ ರಾಮನು ಗಿರಿವನಗಳನ್ನು ಕುರಿತು ದೊರೆವಳೇ ಸೀತೆ, ಭೂಮಿಜಾತೆ ಆತ್ಮ ಕಾಮ ಕಲ್ಪಲತೆ, ದೊರೆವಳೇ ಚೆಲುವೆ? "ಗಿರಿವನಗಳೇ ನಾನು ನಿಮ್ಮನ್ನು ಬೇಡಿಕೊಳ್ಳುವೆನು. ಎಂದು ಸೀತೆಗಾಗಿ ಪರಿತಪಿಸುತ್ತಿದ್ದ ಅಣ್ಣನಾದ ರಾಮನನ್ನು ಕುರಿತು ಲಕ್ಷ್ಮಣನು, **"ತಾಳಿಕೋ ಅಣ್ಣ ತಾಳಿಕೋ, ಸೂರ್ಯನೇ ತೇಜಗೆಡಲು ಕಾಂತಿಯನ್ನು ನೀಡುವವರು ಯಾರು? ರಾಮನೇ ಧೈರ್ಯಗೆಡಲು ಲೋಕಕ್ಕೆ ಸ್ಥೈರ್ಯ ನೀಡುವವರು ಯಾರು?"** ಎಂದು ಹೇಳಿ ಸಂತೈಸಿದನು.

---

**22. ಹೊಸಗಾಲದ ಹಸುಮಕ್ಕಳನ್ನು ಹಕ್ಕಿ ಹೇಗೆ ಹರಸಿದೆ?**

❖ ಕವಿ ಬೇಂದ್ರೆ ಅವರು ಕಾಲದ ಗತಿಯನ್ನು ಹಾರುವ ಹಕ್ಕಿಯೊಂದಿಗೆ ಸಮೀಕರಿಸಿ ನೋಡುವ ಪ್ರಯತ್ನ ಮಾಡಿದ್ದಾರೆ. ಕಾಲದ ಹಕ್ಕಿಯು ಯುಗಯುಗಗಳ ಆಗುಹೋಗುಗಳನ್ನು ತಿಕ್ಕಿ-ತೀಡಿ ಕೆಟ್ಟ ಚರಿತ್ರೆಯನ್ನು ಹಿಂದಕ್ಕೆ ತಳ್ಳುತ್ತ, **ಹೊಸ ಮನ್ವಂತರದ ಪ್ರಗತಿಗೆ ಕಾರಣವಾಗಿದೆ.** ಕಾಲಪಕ್ಷಿಯು ತನ್ನ ರೆಕ್ಕೆಗಳನ್ನು ಬೀಸುವ ಮೂಲಕ ಭೂಮಂಡಲದ ಜೀವಿಗಳಿಗೆ ಚೈತನ್ಯ ನೀಡಿ, **ಹೊಸಗಾಲದ ಹಸುಮಕ್ಕಳನ್ನು ಹರಸಿ, ಉತ್ತಮ ಭವಿಷ್ಯಕ್ಕಾಗಿ ಶುಭ ಹಾರೈಸುತ್ತಿದೆ** ಎಂದು ಕವಿಗಳು ವರ್ಣಿಸುತ್ತಾರೆ.

---

**23. ಪಾರ್ಥ-ಭೀಮರ ಬಗೆಗೆ ದುರ್ಯೋಧನನ ಅಭಿಪ್ರಾಯವೇನು?**

❖ ಭೀಷ್ಮಾಚಾರ್ಯರು ಪಾಂಡವರೊಡನೆ ಸಂಧಿ ಮಾಡಿಕೊ ಎಂದು ಸಲಹೆ ಮಾಡಿದಾಗ ದುರ್ಯೋಧನನು **"ನನ್ನ ಪ್ರೀತಿಯ ಗೆಳೆಯ ಕರ್ಣನನ್ನು ನನ್ನ ಪ್ರೀತಿಯ ತಮ್ಮನಾದ ದುಶ್ಯಾಸನನ್ನು ಕೊಂದ ಅರ್ಜುನ-ಭೀಮರು ಬದುಕಿರುವವರೆಗೆ; ನನ್ನ ದೇಹದಲ್ಲಿ ಪ್ರಾಣ ಇರುವವರೆಗೆ ನಾನು ಸಂಧಿ ಮಾಡಿಕೊಳ್ಳಲು ಒಪ್ಪುವುದಿಲ್ಲ**. ಮೊದಲು ಆ ಇಬ್ಬರನ್ನು ಕೊಲ್ಲುವೆನು.ಅವರನ್ನು ಕೊಂದ ಬಳಿಕ ಧರ್ಮರಾಜನೊಡನೆ ಸಂಧಿ ಮಾಡಿಕೊಳ್ಳುತ್ತೇನೆ. ಎಂದು ಪಾರ್ಥ-ಭೀಮರ ಬಗೆಗೆ ದುರ್ಯೋಧನನು ತನ್ನ ಅಭಿಪ್ರಾಯವನ್ನು ಹೇಳುತ್ತಾನೆ.

---

**24. ವಸಂತ ಮುಖ ತೋರಲಿಲ್ಲ ಕವನದಲ್ಲಿ ಪ್ರಕೃತಿಯ ಸಂಭ್ರಮ ಹೇಗೆ ವ್ಯಕ್ತವಾಗಿದೆ?**

❖ ಒಡೆಯನ ಅಂಗಳದಲ್ಲಿ ಮೈ ತುಂಬಿ ನಿಂತ **ಮಾವಿನ ಮರಗಳು**, ರೆಕ್ಕೆ ಬಿಚ್ಚಿ ಸ್ವಚ್ಛಂದವಾಗಿ **ಹಾರುತ್ತಿರುವ ಹಕ್ಕಿಗಳು**, ಮನದುಂಬಿ **ಹಾಡುವ ಕೋಗಿಲೆಗಳು, ಕಡಲುಕ್ಕಿ** ಹರಿಯುವಂತಹ ಸಂಭ್ರಮ. ವಸಂತನ ಆಗಮನದ ಹಿನ್ನಲೆಯಲ್ಲಿ ಇಳೆಯು ಸಂಭ್ರಮಿಸುತ್ತಿದೆ ಎಂದು **'ವಸಂತ ಮುಖ ತೋರಲಿಲ್ಲ" ಕವನದಲ್ಲಿ ಪ್ರಕೃತಿಯ ಸಂಭ್ರಮ ವ್ಯಕ್ತವಾಗಿದೆ.**

---

**25. ಭಗತ್‌ಸಿಂಗ್ ಜಲಿಯನ್ ವಾಲಾಬಾಗ್ ಮಾರಣ ಹೋಮದಿಂದ ತೆಗೆದುಕೊಂಡ ನಿರ್ಧಾರವೇನು?**

❖ 1919ರ ಏಪ್ರಿಲ್ 13 ರಂದು ಜಲಿಯನ್ ವಾಲಾಬಾಗ್‌ನಲ್ಲಿ ಶಾಂತಿಯುತ ಸಭೆ ಸಂಘಟಿಸಿದ್ದರು. ಸುಮಾರು ಇಪ್ಪತ್ತು ಸಾವಿರ ಜನರಿದ್ದ ಅವರಿಗೆ ಯಾವ ಎಚ್ಚರಿಕೆಯನ್ನೂ ಕೊಡದೆ ಜನರಲ್ ಡಯರ್ ತನ್ನ ಸೈನಿಕರಿಗೆ ಗುಂಡಿನ ದಾಳಿ ನಡೆಸಲು ಆಜ್ಞೆ ನೀಡಿದ, ಈ ಜಲಿಯನ್ ವಾಲಾಬಾಗ್ ಹತ್ಯಾಕಾಂಡದಲ್ಲಿ 400 ಜನ ಕೊಲ್ಲಲ್ಪಟ್ಟರು. 1200ಕ್ಕೂ ಹೆಚ್ಚು ಜನ ಗಾಯಗೊಂಡರು. ಈ ಮಾರಣಹೋಮ ಭಗತ್‌ಸಿಂಗ್‌ನ ಮನಸ್ಸಿನಲ್ಲಿ ಅಚ್ಚಳಿಯದ ಪ್ರಭಾವವನ್ನು ಬೀರಿತ್ತು. 1921ರಲ್ಲಿ ಅವನು ಒಂದು ನಿರ್ಧಾರಕ್ಕೆ ಬಂದ. **"ಒಂದಲ್ಲ ಒಂದು ದಿನ ಈ ದಮನಕಾರಿ ಪ್ರಭುತ್ವವನ್ನು ಧ್ವಂಸ ಮಾಡಲು ಏನನ್ನಾದರೂ ಮಾಡಿಯೇ ತೀರುತ್ತೇನೆಂದೂ, ಆಗ ಕ್ರೂರ ಬ್ರಿಟೀಷ್ ಆಳ್ವಿಕೆ ಅಂತ್ಯವಾಗುತ್ತದೆ ಎಂದಿದ್ದನು."**

---

**26. ಭಗವಂತನಲ್ಲಿ ಶರಣಾಗುವ ಭಾವ ಅಕ್ಕಮಹಾದೇವಿಯ ವಚನದಲ್ಲಿ ಹೇಗೆ ವ್ಯಕ್ತಗೊಂಡಿದೆ?**

❖ **ಶ್ರೀಗಂಧವನ್ನು ಕಡಿದು ಕೊರೆದು ತೇದರೂ** ಏನೇ ಆದರೂ ತನ್ನ **ಕಂಪನ್ನು ಬಿಡುವುದಿಲ್ಲ.** ಹಾಗೆ **ಬಂಗಾರವೂ ಎಷ್ಟೇ ಕತ್ತರಿಸಿ ಬಡಿಸಿಕೊಂಡರೂ** ತನ್ನ ಹೊಳಹನ್ನು ಕಳೆದುಕೊಳ್ಳುವುದಿಲ್ಲ. ಹಾಗೆಯೇ **ಕಬ್ಬನ್ನು ಸಹ ಗಾಣದಲ್ಲಿ ಅರೆದರೂ, ಕಾಯಿಸಿದರೂ** ತನ್ನ ಸಿಹಿಯನ್ನು ಬಿಡುವುದಿಲ್ಲ. ಅಂತೆಯೇ **ನೀನು ನನ್ನನ್ನು ಎಷ್ಟೇ ಪರೀಕ್ಷೆಗೆ ಒಳಪಡಿಸಿದರೂ ಕೊಂದರೂ ನಾನು ನಿನ್ನಲ್ಲಿ ಶರಣು ಎಂಬುದನ್ನು ಬಿಡುವುದಿಲ್ಲ** ಎಂದು ತನ್ನ ಆರಾಧ್ಯದೈವ ಶ್ರೀ ಶೈಲ ಚನ್ನಮಲ್ಲಿಕಾರ್ಜುನನಲ್ಲಿ ಶರಣಾಗುವ ಭಾವ ಅಕ್ಕಮಹಾದೇವಿಯ ವಚನದಲ್ಲಿ ವ್ಯಕ್ತವಾಗಿದೆ.

---

**27. ಪೈಗಳ ತಮ್ಮನ ನೂಲು ಮದುವೆಗೆ ಹೇಗೆ ಸಿದ್ಧತೆ ಮಾಡಿಕೊಳ್ಳುತ್ತಿದ್ದರು?**

❖ ಪೈಗಳ ತಮ್ಮನ ನೂಲು ಮದುವೆಯ ದಿನ ಅಂಗಳದಲಿ ಚಪ್ಪರ ಹಾಕಿದೆ. **ಚಪ್ಪರದಲ್ಲಿ ಒಂದು ಕಡೆಯಲ್ಲಿ ಲಡ್ಡುಗೆಗಳನ್ನು ಕಟ್ಟುತ್ತಾರೆ, ಮತ್ತೊಂದು ಕಡೆ ಮಂಡಿಗೆಗಳನ್ನು ಮಡುಚುತ್ತಾರೆ, ಬೇರೊಂದು ಕಡೆ ಸೇವಿಗೆಯನ್ನು ಒತ್ತುತ್ತಾರೆ.** ಜೋಳದ ಗದ್ದೆಯಲ್ಲಿ ಗಿಳಿಗಳ ಕೋಲಾಹಲದಂತೆ ಚಪ್ಪರವೆಲ್ಲಾ ಗದ್ದಲ.ಹೀಗೆ ಪೈಗಳ ತಮ್ಮನ ನೂಲು ಮದುವೆಗೆ ಸಿದ್ಧತೆಗಳು ನಡೆಯುತ್ತಿದ್ದವು.

---

## V. ಕೆಳಗಿನ ಕವಿ/ಸಾಹಿತಿಗಳ ಕಾಲ, ಸ್ಥಳ, ಕೃತಿ ಮತ್ತು ಪ್ರಶಸ್ತಿ/ಬಿರುದುಗಳನ್ನು ಕುರಿತು ವಾಕ್ಯರೂಪದಲ್ಲಿ ಬರೆಯಿರಿ. 2*3=6

**28. ಪು.ತಿ.ನರಸಿಂಹಾಚಾರ್**

❖ ಪು.ತಿ.ನ. ಕಾವ್ಯನಾಮದಿಂದ ಪ್ರಸಿದ್ಧರಾಗಿರುವ **ಪುರೋಹಿತ ತಿರುನಾರಾಯಣಯ್ಯಂಗಾರ್ಯ ನರಸಿಂಹಾಚಾರ್** ಇವರು ಸಾ.ಶ. **1905** ರಲ್ಲಿ ಮಂಡ್ಯ ಜಿಲ್ಲೆಯ **ಮೇಲುಕೋಟೆಯಲ್ಲಿ** ಜನಿಸಿದರು. ನವೋದಯದ ಪ್ರಮುಖ ಕವಿಗಳಲ್ಲಿ ಒಬ್ಬರಾದ ಪು.ತಿ.ನ. ಅವರು **ಅಹಲ್ಯೆ, ಗೋಕುಲ ನಿರ್ಗಮನ, ಶಬರಿ, ವಿಕಟಕವಿ ವಿಜಯ, ಹಂಸದ ಮಯಂತಿ ಮತ್ತು ಇತರ ರೂಪಕಗಳು,** ಹಣತೆ, ರಸಸರಸ್ವತಿ, ಗಣೇಶದರ್ಶನ, ಶಾರದಯಾಮಿನಿ, ರಥಸಪ್ತಮಿ ಇವರ ಪ್ರಮುಖ ಕೃತಿಗಳು.

ಇವರ ಹಂಸದಮಯಂತಿ ಮತ್ತು ಇತರ ರೂಪಕಗಳು ಕೃತಿಗೆ **ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ**, ಶ್ರೀಹರಿಚರಿತೆ ಕೃತಿಗೆ **ಪಂಪಪ್ರಶಸ್ತಿ** ಲಭಿಸಿದೆ..

---

**29. ರನ್ನ**

❖ ಕನ್ನಡದ ರತ್ನತ್ರಯರಲ್ಲಿ ಒಬ್ಬನಾದ **ರನ್ನನು** ಕ್ರಿ. ಶ. ಸುಮಾರು **949** ರಲ್ಲಿ ಬಾಗಲಕೋಟೆ ಜಿಲ್ಲೆಯ **ಮುದುವೊಳಲು** (ಈಗಿನ ಮುದೋಳ)ಎಂಬ ಗ್ರಾಮದಲ್ಲಿ ಜನಿಸಿದನು. ತಂದೆ ಜಿನವಲ್ಲಭ, ತಾಯಿ ಅಬ್ಬಲಬ್ಬೆ. ಈತನು **'ಸಾಹಸ ಭೀಮ ವಿಜಯಂ (ಗದಾಯುದ್ಧ)', 'ಅಜಿತತೀರ್ಥಂಕರ ಪುರಾಣತಿಲಕಂ', 'ಪರಶುರಾಮಚರಿತಂ', 'ಚಕ್ರೇಶ್ವರಚರಿತಂ'** ಎಂಬಕಾವ್ಯಗಳನ್ನು ಬರೆದಿದ್ದಾನೆ. 'ರನ್ನಕಂದ' ಎಂಬ ನಿಘಂಟನ್ನು ಬರೆದಿರುವುದಾಗಿ ತಿಳಿದುಬರುತ್ತದೆ. ರನ್ನನು ಚಾಲುಕ್ಯ ದೊರೆ ತೈಲಪನ ಆಸ್ಥಾನದಲ್ಲಿದ್ದು ಆತನಿಂದ **'ಕವಿಚಕ್ರವರ್ತಿ'** ಎಂಬ ಬಿರುದನ್ನು ಪಡೆದಿದ್ದಾನೆ.

---

## VI. ಕೆಳಗಿನ ಪದ್ಯಭಾಗಕ್ಕೆ ಪ್ರಸ್ತಾರ ಹಾಕಿ, ಗಣ ವಿಭಾಗಿಸಿ, ಛಂದಸ್ಸಿನ ಹೆಸರನ್ನು ಬರೆಯಿರಿ. 1*3=3

**30. ಒಡವೆಯನರ್ಥಿಗಿತ್ತೆನವನೀತಳಮಂ ಗುರುಗಿತ್ತೆನೀಗಳೊಂ**

| ನ | ಜ | ಭ | ಜ | ಜ | ಜ | ರ |
|---|---|---|---|---|---|---|
| U U U | U _ U | _U U | U_ U | U _ U | U _U | _ U _ |
| ಒಡವೆ | ಯನರ್ಥಿ | ಗಿತ್ತೆನ | ವನೀತ | ಳಮಂ ಗು | ರುಗಿತ್ತೆ | ನೀಗಳೊಂ |

ಈ ಮೇಲಿನ ಪದ್ಯವು ಅಕ್ಷರಗಣದ **'ಚಂಪಕಮಾಲಾವೃತ್ತ ಪದ್ಯ'**ದಲ್ಲಿ ರಚಿತವಾಗಿದೆ.

---

## VII. ಕೆಳಗಿನ ವಾಕ್ಯದಲ್ಲಿರುವ ಅಲಂಕಾರವನ್ನು ಹೆಸರಿಸಿ, ಲಕ್ಷಣ ಬರೆದು ಸಮನ್ವಯಗೊಳಿಸಿ. 1*3=3

31. **ವಸಂತಮಾಸದಲ್ಲಿ ಹೂ ಬಿಟ್ಟ ಮರಗಿಡಗಳು ಮದುವಣಗಿತ್ತಿಯಂತೆ ಶೋಭಿಸುತ್ತಿದ್ದವು.**

- **ಅಲಂಕಾರ :-** **ಉಪಮಾಲಂಕಾರ** (ಪೂರ್ಣೋಪಮಾಲಂಕಾರ)
- **ಲಕ್ಷಣ :-** ಎರಡು ವಸ್ತುಗಳ ಪರಸ್ಪರ ಹೋಲಿಕೆಯೇ ಉಪಮಾಲಂಕಾರ
- **ಉಪಮೇಯ :-** ವಸಂತಮಾಸದಲ್ಲಿ ಹೂ ಬಿಟ್ಟ ಮರಗಿಡಗಳು
- **ಉಪಮಾನ :-** ಮದುವಣಗಿತ್ತಿ
- **ಉಪಮಾ ವಾಚಕ :-** ಅಂತೆ
- **ಸಮಾನ ಧರ್ಮ :-** ಶೋಭಿಸುವುದು

- **ಸಮನ್ವಯ** :– ಇಲ್ಲಿ ಉಪಮೇಯವಾದ ವಸಂತಮಾಸದಲ್ಲಿ ಹೂ ಬಿಟ್ಟ ಮರಗಿಡಗಳನ್ನು, ಉಪಮಾನವಾದ **ಮದುವಣಗಿತಿಗೆ** ಹೋಲಿಸಿ ವರ್ಣಿಸಲಾಗಿದೆ. ಆದ್ದರಿಂದ ಉಪಮಾಲಂಕಾರವಾತದೆ.

---

**VIII. ಕೆಳಗಿನ ಗಾದೆಗಳಲ್ಲಿ ಯಾವುದಾದರೂ ಒಂದನ್ನು ಗಾದೆಯ ಮಹತ್ತ್ವದೊಂದಿಗೆ ವಿಸ್ತರಿಸಿ ಬರೆಯಿರಿ. 1*3=3**

**32. ಹೆತ್ತ ತಾಯಿ ಹೊತ್ತ ನಾಡು ಸ್ವರ್ಗಕ್ಕಿಂತ ಮಿಗಿಲು.**

❖ ಗಾದೆಗಳು ಜನಪದರ ಜೀವನದ ಅನುಭವದ ನುಡಿಮುತ್ತುಗಳು ಇವುಗಳಿಂದ ಜೀವನದ ಮೌಲ್ಯ ಹೆಚ್ಚುತ್ತದೆ.ಆದ್ದರಿಂದಲೇ 'ವೇದ ಸುಳ್ಳಾದರೂ ಗಾದೆ ಸುಳ್ಳಾಗದು' 'ಗಾದೆಗಳನ್ನು ವೇದಗಳಿಗೆ ಸಮಾನ' ಎಂದು ಹೇಳುವರು. ಅಂತಹ ಹಲವು ಪ್ರಸಿದ್ಧ ಗಾದೆಗಳಲ್ಲಿ **'ಹೆತ್ತ ತಾಯಿ ಹೊತ್ತ ನಾಡು ಸ್ವರ್ಗಕ್ಕಿಂತ ಮಿಗಿಲು'** ಎಂಬ ಗಾದೆಯೂ ಒಂದಾಗಿದೆ.

'ಜನನಿ ಜನ್ಮ ಭೂಮಿಶ್ಚ ಸ್ವರ್ಗಾದಪಿ ಗರೀಯಸೀ' ಇದು ವಾಲ್ಮೀಕಿ ರಾಮಾಯಣದಲ್ಲಿ ಬರುವ ಒಂದು ಮಾತು. ಇದರ ಅನುವಾದವೇ ಮೇಲಿನ ಹೇಳಿಕೆ. ಇದರಲ್ಲಿ ತಾಯಿ ಮತ್ತು ನಾಡಿನ ಮಹತ್ವ ಅಡಗಿದೆ. ಹೆತ್ತ ತಾಯಿ ಹೊತ್ತ ನಾಡು ಎರಡು ಒಂದೇ ನಮ್ಮನ್ನು ಹೆತ್ತು ಹೊತು ಸಾಕಿ ಸಲುಹಿದ ತಾಯಿಯ ಮಡಿಲು ಸ್ವರ್ಗಕ್ಕಿಂತಲೂ ಮಿಗಿಲಾದ ಸುಖವನ್ನು ನೀಡುತ್ತದೆ ಎನ್ನುವುದು ಅನುಭವಿಗಳ ಹೇಳಿಕೆ. ಅಂತೆಯೇ ಹೊತ್ತನಾಡು ನಮ್ಮನ್ನು ಜೀವನ ಪೂರ್ತಿ ತನ್ನ ಮಡಿಲಲ್ಲಿಟ್ಟು ಪೋಷಿಸುತ್ತದೆ. ನಮ್ಮ ಜೀವನಕ್ಕೆ ಅಗತ್ಯವಾದಂತಹ ಅನ್ನ, ನೀರು, ಬಟ್ಟೆ, ವಸತಿ, ಹಾಗೂ ಇನ್ನಿತರ ಎಲ್ಲಾ ಅವಶ್ಯಕತೆಗಳನ್ನು ಪೂರೈಸುವಂತಹ ಜನ್ಮ ಭೂಮಿಯನ್ನು ತಾಯಿಗೆ ಹೋಲಿಸಿರುವುದು ಶ್ರೇಷ್ಠವಾಗಿದೆ.

ಮಕ್ಕಳ ಪಾಲನೆಗಾಗಿ ತಾಯಿ ತನ್ನ ಸುಖವನ್ನೆಲ್ಲ ಮರೆತು ಆಹಾರ ನಿದ್ರೆಗಳನ್ನು ತೊರೆದು ಮಗುವಿನ ಲಾಲನೆ ಪೋಷಣೆಗಳಲ್ಲಿಯೇ ಸುಖವನ್ನು ಕಾಣುತ್ತಾಳೆ. ತಾಯಿಯಂತೆಯೇ ನಾವು ಹುಟ್ಟಿದ ನಾಡು ಕೂಡ ಆ ನೆಲದಲ್ಲಿ ಆಡುತ್ತೇವೆ, ಅಗೆಯುತ್ತೇವೆ. ಬೆಳೆಯನ್ನು ಬೆಳೆಯುತ್ತೇವೆ, ಬೆಳೆದುದನ್ನು ತಿಂದು ಬದುಕುತ್ತೇವೆ. ತಾಯಿಯಂತೆ ನಾಡು ನಮ್ಮನ್ನು ಪೋಷಿಸುತ್ತದೆ. ಅದ್ದರಿಂದ ಜನ್ಮಭೂಮಿಯನ್ನು ಮರೆತವರು ತಾಯಿಯನ್ನು ಮರೆತಂತೆಯೇ ಸರಿ. ಆದುದರಿಂದ ಹೆತ್ತತಾಯಿ ಹೊತ್ತನಾಡಿನ ಋಣವನ್ನು ಮರೆಯದೇ ಅವರ ಹಿರಿಮೆಯನ್ನು ಎತ್ತಿಹಿಡಿಯಬೇಕಾದದ್ದು ಪ್ರತಿಯೊಬ್ಬನ ಆದ್ಯಕರ್ತವ್ಯವಾಗಿದೆ.

**ಅಥವಾ**

– ***ದೂರದ ಬೆಟ್ಟ ಕಣ್ಣಿಗೆ ನುಣ್ಣಗೆ :***

❖ ಗಾದೆಗಳು ಜನಪದರ ಜೀವನದ ಅನುಭವದ ನುಡಿಮುತ್ತುಗಳು ಇವುಗಳಿಂದ ಜೀವನದ ಮೌಲ್ಯ ಹೆಚ್ಚುತ್ತದೆ.ಆದ್ದರಿಂದಲೇ 'ವೇದ ಸುಳ್ಳಾದರೂ ಗಾದೆ ಸುಳ್ಳಾಗದು' 'ಗಾದೆಗಳನ್ನು ವೇದಗಳಿಗೆ ಸಮಾನ' ಎಂದುಹೇಳುವರು. ಅಂತಹ ಹಲವು ಪ್ರಸಿದ್ಧ ಗಾದೆಗಳಲ್ಲಿ **'ದೂರದ ಬೆಟ್ಟ ಕಣ್ಣಿಗೆ ನುಣ್ಣಗೆ'** ಒಂದಾಗಿದೆ.

ಬೆಟ್ಟವನ್ನು ದೂರದಿಂದ ನೋಡಿದಾಗ ಎತ್ತರವಾದ ಮರಗಳು, ಹಸಿರು ತಪ್ಪಲುಗಳು ಕಣ್ಣಿಗೆ ತಂಪನ್ನು ಎರೆಯುತ್ತದೆ. ಅದೇ ಹತ್ತಿರದಿಂದ ನೋಡಿದಾಗ ಬೆಟ್ಟದ ತುಂಬೆಲ್ಲಾ ಕಲ್ಲು-ಮುಳ್ಳುಗಳಿಂದ ಕೂಡಿದ್ದು ನಡೆಯಲು ಅಸಾಧ್ಯವಾಗುತ್ತದೆ. ಅದೇರೀತಿ ಸಂಬಂಧ ದೂರದಿಂದ ಚೆನ್ನಾಗಿದ್ದು, ನೋಡುವವರಿಗೆ ಚೆನ್ನಾಗಿದ್ದಾರೆಂದೆನಿಸುತ್ತದೆ. ನಾವು ಹತ್ತಿರವಾದಂತೆಯೇ ದುರ್ಗುಣಗಳು, ಅನೇಕ ದೋಷಗಳು ಕಾಣಿಸುತ್ತವೆ. ಆದ್ದರಿಂದ ಹತ್ತಿರದಿಂದಲೇ ಸೂಕ್ಷ್ಮವಾಗಿ ಗಮನಿಸಿ ಸಂಬಂಧವನ್ನು ಬೆಳೆಸಿಕೊಳ್ಳಬೇಕೆಂದು ಈ ಗಾದೆ ಸೂಚಿಸುತ್ತದೆ. ಹಾಗೇ ಸಮಾಜದಲ್ಲಿ ನಮ್ಮ ಸುತ್ತ ಮುತ್ತ ಇರುವವರು, ನಮ್ಮ ನೆಂಟರಿಷ್ಟರು ಹಸನ್ಮುಖರಾಗಿ ಇರುವುದನ್ನು ನೋಡಿ ಅವರಿಗೆ ಯಾವುದೇ ಕಷ್ಟಗಳಿಲ್ಲ, ಬರಿ ಸುಖ ಸಂತೋಷಗಳೇ ತುಂಬಿವೆ ಎಂದು ಯೋಚಿಸುವುದು ಸರಿಯಲ್ಲ. ಏಕೆಂದರೆ ಅವರಿಗಿರುವ ಕಷ್ಟ ನಮಗೆ ಗೊತ್ತಿರುವುದಿಲ್ಲ. ಆದ್ದರಿಂದ ತನಗೆ ಬಂದ ಕಷ್ಟಗಳನ್ನು ನಗುನಗುತ್ತ ಎದುರಿಸಬೇಕು, ಪ್ರಪಂಚದಲ್ಲಿ ಎಲ್ಲರಿಗು ಕಷ್ಟಬರುತ್ತದೆ ಎಂಬ ಅಂಶವನ್ನು ನೆನಪಿನಲ್ಲಿಡಬೇಕು. ಅದು ಬಿಟ್ಟು ತನಗೇ ಎಲ್ಲ ಕಷ್ಟಗಳನ್ನು ಕೊಟ್ಟಿದ್ದಾನೆ ಎಂದು ಯೋಚಿಸುವುದು ತಪ್ಪು ಎಂದೂ ಈ ಗಾದೆ ಹೇಳುತ್ತದೆ.

---

**IX. ಕೆಳಗಿನ ವಾಕ್ಯ ಅಥವಾ ಹೇಳಿಕೆಗಳಿಗೆ ಸಂದರ್ಭ ಮತ್ತು ಸ್ವಾರಸ್ಯಗಳನ್ನು ಬರೆಯಿರಿ. 6*3=18**

**33. "ನಾನು ಮುಖ ಮೇಲಾಗಿ ಬಿದ್ದಿದ್ದೇನೆ?**

❖ **ಆಯ್ಕೆ :–**ಈ ವಾಕ್ಯವನ್ನು ಎ.ಎನ್.ಮೂರ್ತಿರಾವ್' ಅವರು ರಚಿಸಿರುವ **'ಸಮಗ್ರ ಲಲಿತಪ್ರಬಂಧಗಳು'** ಕೃತಿಯಿಂದ ಆಯ್ದ **'ವ್ಯಾಘ್ರಗೀತೆ'** ಎಂಬ ಗದ್ಯಭಾಗದಿಂದ ಆರಿಸಿಕೊಳ್ಳಲಾಗಿದೆ.

**ಸಂದರ್ಭ :–** ಶಾನುಭೋಗರು ಮದಲಿಂಗನ ಕಣಿವೆಯ ದಾರಿಯಲ್ಲಿ ಹುಲಿಯ ಆಕ್ರಮಣದಿಂದ ಹೆದರಿ, ಮರ ಹತ್ತಲು ಓಡುವಾಗ ಕಲ್ಲನ್ನು ಎಡವಿ ಬಿದ್ದು, ಪ್ರಜ್ಞೆ ತಪ್ಪಿದಾಗ, ಅದೇ ದಾರಿಯಲ್ಲಿ ಹೋಗುತ್ತಿದ್ದ ರೈತರು ಅವರ ಮುಖದ ಮೇಲೆ ನೀರೆರೆಚಿ ಎಚ್ಚರಿಸಿದ ಸಂದರ್ಭದಲ್ಲಿ ಈ ಮಾತನ್ನು ಹೇಳುತ್ತಾರೆ.

**ಸ್ವಾರಸ್ಯ :–** "ನಾನು ಪ್ರಜ್ಞೆ ತಪ್ಪಿ ಬಿದ್ದಿದ್ದಾಗ ಹುಲಿಯು ಏಕೆ ಎಳೆದುಕೊಂಡು ಹೋಗಲಿಲ್ಲ?" ಎಂಬ ಸಮಸ್ಯೆಗೆ ಶಾನುಭೋಗರು ಈ ಪ್ರಶ್ನೆಯ ಮೂಲಕ ಉತ್ತರ ಕಂಡುಕೊಳ್ಳುವುದು ಇಲ್ಲಿಯ ಸ್ವಾರಸ್ಯವಾಗಿದೆ.

---

## 34. "ಮನುಷ್ಯನಂತೆ ಟೊಪ್ಪಿಗೆಯಲ್ಲವೇ?

❖ **ಆಯ್ಕೆ :–** ಈ ವಾಕ್ಯವನ್ನು **'ವಿ.ಕೃ.ಗೋಕಾಕ'** ಅವರು ರಚಿಸಿರುವ **'ಸಮುದ್ರದಾಚೆಯಿಂದ'** ಎಂಬ ಪ್ರವಾಸ ಕಥನದಿಂದ ಆಯ್ದ **'ಲಂಡನ್‌ನಗರ'** ಎಂಬ ಗದ್ಯಭಾಗದಿಂದ ಆರಿಸಲಾಗಿದೆ.

**ಸಂದರ್ಭ:–** ಲೇಖಕರು ಇಂಗ್ಲೆಂಡಿನ ತಮ್ಮ ಪ್ರವಾಸದ ಅನುಭವವನ್ನು ಕುರಿತು ಹೇಳುತ್ತಾ, ಇಂಗ್ಲೆಂಡಿನಲ್ಲಿ ಹೆಣ್ಣುಮಕ್ಕಳನ್ನು ಅತ್ಯಾದರದಿಂದ ಗೌರವಿಸುವ ಸಂಸ್ಕೃತಿಯನ್ನು ಕಾಣಬಹುದು. ಇಲ್ಲಿಯ ಹೆಣ್ಣುಮಕ್ಕಳ ಟೊಪ್ಪಿಗೆಯನ್ನು ಕುತೂಹಲದಿಂದ ನೋಡಿದ ಅವರು ಒಂದು ಟೊಪ್ಪಿಗೆಯಂತೆ ಇನ್ನೊಂದಿರುವುದಿಲ್ಲ. ಸಿಕ್ಕಿಸಿದ ಪುಚ್ಚವಾದರೂ ಕನಿಷ್ಠಪಕ್ಷಕ್ಕೆ ಬೇರೆಯಾಗಿರುತ್ತದೆ! ಕೋಟ್ಯವಧಿ ಟೊಪ್ಪಿಗೆಗಳನ್ನು ಬೇಕಾದರೆ ಪರೀಕ್ಷಿಸಿ ಇದನ್ನು ಮನಗಾಣಬಹುದು. ಎಂದು ಹೇಳುವ ಸಂದರ್ಭದಲ್ಲಿ ಈ ಮಾತನ್ನು ಹೇಳುತ್ತಾರೆ.

**ಸ್ವಾರಸ್ಯ:–** ಇಂಗ್ಲೆಂಡಿನ ಹೆಣ್ಣು ಮಕ್ಕಳಿಗೆ ಟೊಪ್ಪಿಗೆಯ ಮೇಲಿರುವ ಪ್ರೀತಿಯನ್ನು ಕುರಿತು ಹೇಳುವ ಲೇಖಕರು ಮನುಷ್ಯನಂತೆ ಟೊಪ್ಪಿಗೆಯಲ್ಲವೇ? ಎಂಬುದನ್ನು ಸ್ವಾರಸ್ಯಕರವಾಗಿ ಹೇಳಿದ್ದಾರೆ.

---

## 35. "ಪಸರಂಗೊಟ್ಟೆನಿಲ್ಲಿದರ್ಕೆ ಮುಳಿಯದಿರಿಂ"

❖ **ಆಯ್ಕೆ :** ಈ ಮೇಲಿನ ವಾಕ್ಯವನ್ನು **ಶಿವಕೋಟ್ಯಾಚಾರ್ಯರು** ಬರೆದ **'ವಡ್ಡಾರಾಧನೆ'ಯ** ಸುಕುಮಾರಸ್ವಾಮಿ ಕಥೆಯಿಂದ ಆರಿಸಲಾದ **'ಅಗ್ನಿಭೂತಿ ವಾಯುಭೂತಿಯರ ಕಥೆ'** ಎಂಬ ಗದ್ಯಭಾಗದಿಂದ ಆಯ್ದುಕೊಳ್ಳಲಾಗಿದೆ.

**ಸಂದರ್ಭ:** ಅಗ್ನಿಭೂತಿ ವಾಯುಭೂತಿಯರು ಸೂರ್ಯಮಿತ್ರನು ನೀಡಿದ ನಿರ್ಬಂಧವನ್ನು ಒಪ್ಪಿಕೊಂಡು ವಿದ್ಯೆಯನ್ನು ಕಲಿಯಲು ಪ್ರಾರಂಭಿಸಿದರು. ಏಳೆಂಟು ವರ್ಷಗಳೊಳಗೆ ಅವರಿಗೆ ವಿದ್ಯೆ ಕಲಿಸಿ ಸೂರ್ಯಮಿತ್ರನು ಅವರನ್ನು ಯೋಗ್ಯರನ್ನಾಗಿ ಮಾಡಿದನು. "ತಮ್ಮ ಅನುಗ್ರಹದಿಂದ ನಾವು ಎಲ್ಲಾ ಶಾಸ್ತ್ರಗಳನ್ನು ಕಲಿತು ವಿದ್ವಾಂಸರಾದವು" ಎಂದು ಅವರು ಹೇಳಿ ತಮ್ಮ ಪಟ್ಟಣಕ್ಕೆ ತೆರಳಲು ಸಿದ್ಧರಾದಾಗ ಸೂರ್ಯಮಿತ್ರನು ಹೀಗೆಂದನು– "ನೀವು ನನ್ನ ತಂಗಿಯ ಮಕ್ಕಳು, ನೀವು ಹಿಂದೆ ನಿಮ್ಮ ತಂದೆ ಕೊಟ್ಟ ಸಲುಗೆಯಿಂದ ಉನ್ಮತ್ತರಾಗಿ ಕೆಟ್ಟು ಹೋದಿರಿ. ಇಲ್ಲಿ ಕೂಡ ಎಲ್ಲಿಯಾದರೂ ಸೊಕ್ಕಿ ಕೆಟ್ಟು ಹೋಗುವಿರೆಂದು ಭಾವಿಸಿ,ನಾನು ನಿಮ್ಮನ್ನು ಯೋಗ್ಯರನ್ನಾಗಿ ಮಾಡುವ ಉದ್ದೇಶದ ಕಾರಣದಿಂದ ಸಲುಗೆ ಕೊಡಲಿಲ್ಲ.ಇದಕ್ಕೆ ನೀವು ಸಿಟ್ಟಾಗಬಾರದು. ನನ್ನ ತಪ್ಪನ್ನು ಕ್ಷಮಿಸಿರಿ ಎಂದು ಹೇಳುವಾಗ ಮೇಲಿನ ಮಾತು ಬಂದಿದೆ.

**ಸ್ವಾರಸ್ಯ :** ಅಗ್ನಿಭೂತಿ ವಾಯುಭೂತಿಯರು ಯೋಗ್ಯರಾದ ಬಳಿಕ ಅವರ ಮಾವನಾದ ಸೂರ್ಯಮಿತ್ರನು ಅವರು ತನ್ನ ಸೋದರಳಿಯರೆಂದು ಹೇಳುವ ಸಂಗತಿಯು ಇಲ್ಲಿ ಸ್ವಾರಸ್ಯಪೂರ್ಣವಾಗಿ ಮೂಡಿ ಬಂದಿದೆ.

---

## 36. "ಹಸುರಾಗಸ; ಹಸುರು ಮುಗಿಲು"

❖ **ಆಯ್ಕೆ :–** ಈ ವಾಕ್ಯವನ್ನು **'ಕುವೆಂಪು'** ಅವರ **'ಪಕ್ಷಿಕಾಶಿ'** ಕವನ ಸಂಕಲನದಿಂದ ಆರಿಸಲಾಗಿರುವ **'ಹಸುರು'** ಎಂಬ ಪದ್ಯದಿಂದ ಆರಿಸಲಾಗಿದೆ.

**ಸಂದರ್ಭ:–** ಪ್ರಕೃತಿಯ ಹಸುರುಗಳೊಂದಿಗೆ ಕುವೆಂಪು ಹೊಂದಿದ್ದ ಸಮೀಪ ಸಂಬಂಧವನ್ನು ವರ್ಣಿಸುತ್ತಾ ಅವರಿಗೆ ಹಸುರಾಗಿರುವ ಆಕಾಶ, ಹಸುರಿನ ಮುಗಿಲು, ಹಚ್ಚಹಸುರು ಗದ್ದೆಯ ಬಯಲು, ಹಸುರಿನಿಂದ ಕಂಗೊಳಿಸುವ ಬೆಟ್ಟಗಳು, ಹಸುರಾಗಿರುವ ಕಣಿವೆಗಳು, ಸಂಜೆಯ ಬಿಸಿಲೂ ಕೂಡ ಹಸುರು ಹೊದ್ದು ಕಂಗೊಳಿಸುತಿದೆ ಎಂದು ವರ್ಣಿಸುವ ಸಂದರ್ಭದಲ್ಲಿ ಈ ಮಾತನ್ನು ಹೇಳಿದ್ದಾರೆ.

**ಸ್ವಾರಸ್ಯ:–** **'ಕವಿಶೈಲ'ದಲ್ಲಿ ಅವರಿಗುಂಟಾದ ಸೌಂದರ್ಯಾನುಭವ.** ಪ್ರಕೃತಿ ಹಾಗೂ ಅಲ್ಲಿಯ ಹಸುರುನೊಂದಿಗೆ ಕುವೆಂಪು ಹೊಂದಿದ್ದ ಸಮೀಪ ಸಂಬಂಧವು ಈ ಮಾತಿನಲ್ಲಿ ಸ್ವಾರಸ್ಯಪೂರ್ಣವಾಗಿ ವರ್ಣಿಸಲಾಗಿದೆ.

---

37. **"ಹೊಡೆದರೊ ಗುಂಡ ಕರುಣ ಇಲ್ಲದ್ದಂಗ"**

38. **ಆಯ್ಕೆ :–**ಈ ವಾಕ್ಯವನ್ನು ಡಾ. ಬಿ. ಎಸ್. ಗದ್ದಗಿಮಠ ಅವರು ಸಂಪಾದಿಸಿರುವ 'ಕನ್ನಡ ಜನಪದ ಗೀತೆಗಳು' ಕೃತಿಯಿಂದ ಆಯ್ದ 'ಹಲಗಲಿಯ ಬೇಡರು' ಎಂಬ ಲಾವಣಿಯಿಂದ ಆರಿಸಲಾಗಿದೆ.
**ಸಂದರ್ಭ :–** ನಿಶ್ಶಸ್ತ್ರೀಕರಣದ ಆದೇಶವನ್ನು ವಿರೋಧಿಸಿ ಬ್ರಿಟಿಷ್ ಸರ್ಕಾರದ ವಿರುದ್ಧ ದಂಗೆ ಎದ್ದ ಹಲಗಲಿಯ ಬೇಡರನ್ನು ಬಗ್ಗುಬಡಿಯಲು ಬ್ರಿಟಿಷರ ದಂಡು ಬಂದು, ಹಲಗಲಿಯ ಬೇಡರ ಬೆನ್ನು ಹತ್ತಿ ಕೊಂದು, ಎದುರಿಗೆ ಸಿಕ್ಕಸಿಕ್ಕವರಿಗೆಲ್ಲ ಕರುಣೆ ಇಲ್ಲದೆ ಗುಂಡು ಹೊಡೆದು ಸಾಯಿಸಿದರು ಎಂದು ಲಾವಣಿಕಾರನು ಹೇಳುವ ಸಂದರ್ಭದಲ್ಲಿ ಈ ಮಾತು ಬಂದಿದೆ.
**ಸ್ವಾರಸ್ಯ :–** ಹಲಗಲಿಯ ಬೇಡರ ಮೇಲೆ ನಿಷ್ಕರುಣೆಯಿಂದ ಗುಂಡು ಹಾರಿಸಿಕೊಲ್ಲುವ ಬ್ರಿಟಿಷರ ಕ್ರೌರ್ಯದ ಪರಮಾವಧಿಯನ್ನು ಈ ಮಾತಿನಲ್ಲಿ ಸ್ವಾರಸ್ಯಪೂರ್ಣವಾಗಿ ವರ್ಣಿಸಲಾಗಿದೆ.

---

39. **"ನೂಂಕಂತಪ್ಪನನಜೆಯೆನೆಂದು ಸಭೆಯೊಳ್ ನುಡಿದಂ"**

40. **ಆಯ್ಕೆ :–** ಈ ವಾಕ್ಯವನ್ನು 'ಪಂಪ ಮಹಾಕವಿ' ರಚಿಸಿರುವ 'ವಿಕ್ರಮಾರ್ಜುನ ವಿಜಯಂ' ಕೃತಿಯಿಂದ ಆಯ್ದ 'ಕೆಮ್ಮನೆ ಮೀಸೆವೊತ್ತೆನೇ' ಎಂಬ ಪದ್ಯಭಾಗದಿಂದ ತೆಗೆದುಕೊಳ್ಳಲಾಗಿದೆ.
**ಸಂದರ್ಭ :–** ದ್ರೋಣನು ದ್ರುಪದನ ಅರಮನೆಯ ಬಾಗಿಲಲ್ಲಿ ನಿಂತು ಬಾಗಿಲು ಕಾಯುವವನನ್ನು ಕರೆದು ನಿಮ್ಮ ಜೊತೆಯಲ್ಲಾಟವಾಡಿದ ಸ್ನೇಹಿತನಾದ ದ್ರೋಣನೆಂಬ ಬ್ರಾಹ್ಮಣನು ಬಂದಿದ್ದಾನೆಂದು ನಿಮ್ಮ ರಾಜನಿಗೆ ತಿಳಿಯಪಡಿಸು ಎಂದು ಹೇಳಿ ಕಳುಹಿಸಿದಾಗ, ದ್ವಾರಪಾಲಕನು ಅದೇರೀತಿಯಾಗಿ ದ್ರುಪನಿಗೆ ಹೇಳುತ್ತಾನೆ. ಇದರಿಂದ **ಕೋಪಗೊಂಡ ದ್ರುಪದನು ಈ ಮೇಲಿನಂತೆ ದ್ವಾರಪಾಲಕನಿಗೆ ಹೇಳಿ ಕಳುಹಿಸುತ್ತಾನೆ.**
**ಸ್ವಾರಸ್ಯ :–** ತನ್ನ ಸಹಪಾಠಿಯಾಗಿದ್ದ ಆತ್ಮೀಯ ಸ್ನೇಹಿತ ಒಬ್ಬ ಬಡವನೆಂಬ ಕಾರಣಕ್ಕೆ "ದ್ರೋಣ ಎಂಬುವವನು ಬ್ರಾಹ್ಮಣನೇ? ನನಗೆ ಹೇಗೆ ಗೆಳೆಯನು?" ಎಂದು ಹೇಳುವ ದೃಪದನ ಅಹಂಕಾರ ಇಲ್ಲಿ ಸ್ವಾರಸ್ಯಪೂರ್ಣವಾಗಿ ವ್ಯಕ್ತವಾಗಿದೆ.

---

## X. ಈ ಕೆಳಗಿನ ಪದ್ಯಭಾಗವನ್ನು ಪೂರ್ಣಗೊಳಿಸಿರಿ. 1*4=4

39. ಕಲುಷಿತವಾದೀ ನದೀ ಜಲಗಳಿಗೆ
ಮುಂಗಾರಿನ ಮಳೆಯಾಗೋಣ
ಬರಡಾಗಿರುವೀ ಕಾಡು ಮೇಡುಗಳ
ವಸಂತವಾಗುತ ಮುಟ್ಟೋಣ

**ಅಥವಾ**

ಮತಗಳೆಲ್ಲವೂ ಪಥಗಳು ಎನ್ನುವ
ಹೊಸ ಎಚ್ಚರದೊಳು ಬದುಕೋಣ
ಭಯ ಸಂಶಯದೊಳು ಕಂದಿದ ಕಣ್ಣೊಳು
ನಾಳಿನ ಕನಸನು ಬಿತ್ತೋಣ.

---

## XI. ಈ ಕೆಳಗಿನ ಪದ್ಯಭಾಗವನ್ನು ಓದಿ ಅರ್ಥಮಾಡಿಕೊಂಡು, ಅಡಕವಾಗಿರುವ ಮೌಲ್ಯವನ್ನಾಧರಿಸಿ, ಸಾರಾಂಶವನ್ನು ಬರೆಯಿರಿ. 1*4=4

40. ಉರ್ವಿಯೊಳ್ ಕೌಸಲ್ಯೆ ಪಡೆದ ಕುವರಂ ರಾಮ ।
ನೊರ್ವನೇ ವೀರನಾತನ ಯಜ್ಞತುರಗಮಿದು ।
ನಿರ್ವಹಿಸಲಾರ್ಪರಾರಾದೊಡಂ ತಡೆಯಲೆಂದಿರ್ದ ಲೇಖನವನೋದಿ ॥
ಗರ್ವಮಂ ಬಿಡಿಸದಿರ್ದೊಡೆ ತನ್ನ ಮಾತೆಯಂ ।
ಸರ್ವಜನಮುಂ ಬಂಜೆಯೆನ್ನದಿರ್ದಪುದೆ ತನ ।
ಗುರ್ವತೋಳ್ಗಳಿವೇತಕೆಂದು ಸಲೆ ವಾಜಿಯಂ ತೊಟ್ಟು ಲವನುರಿದೆದ್ದನು

❖ ಪ್ರಸ್ತುತ ಪದ್ಯಭಾಗವನ್ನು 'ಲಕ್ಷ್ಮೀಶ ಕವಿ' ಬರೆದ 'ಜೈಮಿನಿ ಭಾರತ' ಕೃತಿಯಿಂದ ಆಯ್ದ 'ವೀರಲವ' ಪದ್ಯಭಾಗದಿಂದ ಆಯ್ದುಕೊಳ್ಳಲಾಗಿದೆ. ಈ ಪದ್ಯಭಾಗದಲ್ಲಿ ವೀರಲವನು ವಾಲ್ಮೀಕಿ ಮುನಿಗಳ ಆಶ್ರಮದಲ್ಲಿ ಬೆಳೆದರೂ

ಆತನಲ್ಲಿ ಸಹಜವಾಗಿರುವ **ಕ್ಷಾತ್ರಗುಣದ, ವೀರತನ, ಪರಾಕ್ರಮಗಳು** ಹಾಗೂ ತಾಯಿಯ ಮೇಲೆ ಅವನಿಗಿರುವ **ಗೌರವ ಭಾವನೆಯನ್ನು** ಸ್ವಾರಸ್ಯಕರವಾಗಿ ವರ್ಣಿಸಲಾಗಿದೆ.

ಭೂಮಂಡಲವನ್ನು ಸಂಚರಿಸುತ್ತ ಬಂದ ಶ್ರೀರಾಮನ ಯಜ್ಞದ ಕುದುರೆಯು ವಾಲ್ಮೀಕಿ ಮುನಿಗಳ ಆಶ್ರಮವನ್ನು ಪ್ರವೇಶಿಸಿ, ಅಲ್ಲಿನ ಹೂದೋಟವನ್ನು ನುಗ್ಗುನುರಿಯಾಗುವಂತೆ ತುಳಿದಿತು. ಆ ಸಮಯಕ್ಕೆ ಅದರ ಕಾವಲಿಗೆ ಇದ್ದ ವೀರಲವನು ತನ್ನ ಸ್ನೇಹಿತರೊಂದಿಗೆ ಉದ್ಯಾನವನಕ್ಕೆ ಬಂದು, ಆ ಸುಂದರವಾದ ಕುದುರೆಯ ಹಣೆಯ ಮೇಲಿದ್ದ ಪಟ್ಟದ ಲಿಖಿತವನ್ನು ಕುತೂಹಲದಿಂದ ಓದಿದನು.

ಆ ಪಟ್ಟದ ಲಿಖಿತದಲ್ಲಿ ಈ ರೀತಿ ಬರೆಯಲಾಗಿತ್ತು. **"ಈ ಭೂಮಂಡಲದಲ್ಲಿ ಕೌಸಲ್ಯ ಪಡೆದ ಕುಮಾರನಾದ ರಾಮನೊಬ್ಬನೇ ವೀರನು ಆತನ ಯಜ್ಞದ ಕುದುರೆಯಿದು ಗೆಲ್ಲಲು ಸಾಮರ್ಥ್ಯವುಳ್ಳ ಯಾರೇ ಆದರೂ ಇದನ್ನು ಕಟ್ಟಲಿ ಎಂದು ಬರೆಯಲಾಗಿತ್ತು".** ಆ ಲೇಖನವನ್ನು ಓದಿ ಕೋಪಗೊಂಡ ವೀರಲವನು "ಶ್ರೀರಾಮನ ಅಹಂಕಾರವನ್ನು ಅಡಗಿಸದಿದ್ದರೆ ಸರ್ವಜನರು ನನ್ನ ತಾಯಿಯನ್ನು ಬಂಜೆ ಎನ್ನುತ್ತಾರೆ. ನನಗಿರುವ ಈ ಬಲವಾದ ತೋಳುಗಳೇಕೆ?" ಎಂದು ಹೇಳುತ್ತಾ ಶಪಥ ಮಾಡಿದ ಲವನು ಕೋಪದಿಂದ ಕುದುರೆಯನ್ನು ಹಿಡಿದುಕೊಂಡನು.

**ಮೌಲ್ಯ :-** ಈ ಪದ್ಯಭಾಗದಲ್ಲಿ ವೀರಲವನು ವಾಲ್ಮೀಕಿ ಮುನಿಗಳ ಆಶ್ರಮದಲ್ಲಿ ಬೆಳೆದರೂ ಆತನಲ್ಲಿ ಸಹಜವಾಗಿರುವ **ಕ್ಷಾತ್ರಗುಣದ, ವೀರತನ, ಪರಾಕ್ರಮಗಳು** ಹಾಗೂ ತಾಯಿಯ ಮೇಲೆ ಅವನಿಗಿರುವ **ಗೌರವ ಭಾವನೆಯ** ಮೌಲ್ಯಗಳು ಅಡಕವಾಗಿವೆ.

---

## XII. ಕೆಳಗಿನ ಪ್ರಶ್ನೆಗಳಿಗೆ ಎಂಟು ಅಥವಾ ಹತ್ತು ವಾಕ್ಯಗಳಲ್ಲಿ ಉತ್ತರ ಬರೆಯಿರಿ. 2*4=8

**41. ನಾಲ್ವಡಿ ಕೃಷ್ಣರಾಜ ಒಡೆಯರ ಕಾಲದಲ್ಲಿ ಮೈಸೂರು 'ಮಾದರಿ ಮೈಸೂರು ರಾಜ್ಯ' ಹೇಗಾಯಿತು? ವಿವರಿಸಿ.**

❖ **1902ರ ಆಗಸ್ಟ್ 8ನೇ ತಾರೀಖಿನಿಂದ ಮೈಸೂರು ರಾಜ್ಯದ ನೇರ ಉಸ್ತುವಾರಿ ಪಡೆದ ನಾಲ್ವಡಿ ಕೃಷ್ಣರಾಜ ಒಡೆಯರು,** ಆಗ ದಿವಾನರಾಗಿದ್ದ ಸರ್.ಕೆ. ಶೇಷಾದ್ರಿ ಅಯ್ಯರ್‌ರವರ ಸಹಕಾರದೊಡನೆ ಮೈಸೂರು ರಾಜ್ಯದ ಸರ್ವತೋಮುಖ ಅಭಿವೃದ್ಧಿಗೆ ಕಂಕಣಬದ್ಧರಾದರು.

ನಾಲ್ವಡಿ ಕೃಷ್ಣರಾಜರು ಹೊಸ ಕಾನೂನು ಜಾರಿಗೆ ಮೂಲಕ **ಪ್ರಜಾಪ್ರತಿನಿಧಿ ಸಭೆ**ಯನ್ನು ಶಾಸನಬದ್ಧ ಸಂಸ್ಥೆಯನ್ನಾಗಿ ಮಾರ್ಪಡಿಸಿದರು. ಇದು ಪ್ರಜಾತಂತ್ರದ ದೃಷ್ಟಿಯಿಂದ ಭಾರತದಲ್ಲಿಯೇ ಮಾದರಿಯಾದ ಸಂಸ್ಥೆಯಾಗಿ ಕಾರ್ಯ ನಿರ್ವಹಿಸಲು ಆರಂಭಿಸಿತು. ಮೇಲ್ಮನೆ ರೀತಿಯಲ್ಲಿ ಕಾರ್ಯನಿರ್ವಹಿಸುವ **ನ್ಯಾಯ ವಿಧಾಯಕ ಸಭೆ**ಯನ್ನೂ ಸಹ ಸ್ಥಾಪಿಸಿದರು. ಸ್ಥಳೀಯ ಸಂಸ್ಥೆಗಳನ್ನು ರಚಿಸಿ **ಆಡಳಿತ ವಿಕೇಂದ್ರೀಕರಣಕ್ಕೆ** ಅನುವು ಮಾಡಿಕೊಟ್ಟರು. **ಗ್ರಾಮ ನಿರ್ಮಲೀಕರಣ, ವೈದ್ಯ ಸಹಾಯ, ವಿದ್ಯಾ ಪ್ರಚಾರ, ನೀರಿನ ಸೌಕರ್ಯ, ಪ್ರಯಾಣ ಸೌಲಭ್ಯ** ಮುಂತಾದ ಕ್ಷೇತ್ರಗಳನ್ನು ಸ್ವಯಂ ಆಡಳಿತ ಕ್ಷೇತ್ರಗಳನ್ನಾಗಿ ಮಾಡಿದರು. ಮೈಸೂರು ಸಂಸ್ಥಾನವನ್ನ ಮಾದರಿ ಸಂಸ್ಥಾನವನ್ನಾಗಿ ರೂಪಿಸಿದರು. 'ಸಾಮಾಜಿಕ ಕಾನೂನುಗಳ ಹರಿಕಾರ' ಎಂದು ಹೆಸರಾದರು. ಸಾಹಿತ್ಯ, ಸಂಗೀತ, ವಾಸ್ತುಶಿಲ್ಪಗಳ ಅಭಿವೃದ್ಧಿಗೆ ಒತ್ತು ನೀಡಿದರು. ಬೆಂಗಳೂರಿನಲ್ಲಿ **ಕನ್ನಡ ಸಾಹಿತ್ಯ ಪರಿಷತ್ತನ್ನು** ಪ್ರಾರಂಭಿಸಿದರು.

ಏಷ್ಯಾ ಖಂಡದಲ್ಲೇ ಮೊದಲ ಜಲವಿದ್ಯುತ್ ಯೋಜನೆಯಾದ **ಶಿವನಸಮುದ್ರದ ಬಳಿ ಕಾವೇರಿ ನದಿಯಿಂದ ಜಲವಿದ್ಯುತ್ ಉತ್ಪಾದನಾ ಕೇಂದ್ರ** ಪ್ರಾರಂಭವಾಯಿತು. 1900ರಲ್ಲಿಯೇ ಶಿವನಸಮುದ್ರದ ಬಳಿ ಕಾವೇರಿ ನದಿಯಿಂದ ಜಲವಿದ್ಯುತ್ ಉತ್ಪಾದನಾ ಕೇಂದ್ರ ಪ್ರಾರಂಭವಾಯಿತು. ಇದು ಭಾರತ ಮಾತ್ರವಲ್ಲ, ಏಷ್ಯಾ ಖಂಡದಲ್ಲೇ ಮೊದಲ ಜಲವಿದ್ಯುತ್ ಯೋಜನೆ. 1907ರಲ್ಲಿ ವಾಣಿ ವಿಲಾಸ ಸಾಗರ (ಮಾರಿ ಕಣಿವೆ) ಕಟ್ಟಲ್ಪಟ್ಟಿತು. 1911ರಲ್ಲಿ ಕೃಷ್ಣರಾಜ ಸಾಗರ ಇವರ ಬೃಹತ್ ಮುಂಗಾಣ್ಕೆಯ ಕೊಡುಗೆ. **ಪ್ರಾಥಮಿಕ ಮತ್ತು ಮಾಧ್ಯಮಿಕ ವಿದ್ಯಾಭ್ಯಾಸವನ್ನು ಉಚಿತ ಮತ್ತು ಕಡ್ಡಾಯ**ವಾಗಿ ಪ್ರಾರಂಭಿಸಲಾಯಿತು. ರಾಜ್ಯದ ಪ್ರಥಮ ವಿಶ್ವವಿದ್ಯಾನಿಲಯವಾದ ಮೈಸೂರು ವಿಶ್ವವಿದ್ಯಾನಿಲಯ, ಸ್ಟೇಟ್ ಬ್ಯಾಂಕ್ ಆಫ್ ಮೈಸೂರು, ಹಾಗೂ ಸಹಕಾರ ಸಂಘಗಳನ್ನು ಸ್ಥಾಪಿಸಿದರು.

ಹೀಗೆ ನಾಲ್ವಡಿ ಕೃಷ್ಣರಾಜ ಒಡೆಯರ ಕಾಲದಲ್ಲಿ ಮೈಸೂರು ಸಂಸ್ಥಾನವು 'ಮಾದರಿ ಮೈಸೂರು ರಾಜ್ಯ, ಎಂಬ ಕೀರ್ತಿಗೆ ಪಾತ್ರವಾಯಿತು ಹಾಗೂ ನಾಲ್ವಡಿ ಕೃಷ್ಣರಾಜ ಒಡೆಯರನ್ನು 'ಸಾಮಾಜಿಕ ಕಾನೂನುಗಳ ಹರಿಕಾರ' ಎಂದು ಪ್ರಸಿದ್ಧರಾದರು.

ಅಥವಾ

**–ವಿಶ್ವೇಶ್ವರಯ್ಯ ಅವರು ಮೈಸೂರು ದಿವಾನರಾಗಿ ಸಲ್ಲಿಸಿದ ಸೇವೆಯನ್ನು ಕುರಿತು ಬರೆಯಿರಿ.**

❖ ಮೈಸೂರು ಸಂಸ್ಥಾನದ ಮಹಾರಾಜರಾಗಿದ್ದ ನಾಲ್ವಡಿ ಕೃಷ್ಣರಾಜ ಒಡೆಯರು ವಿಶ್ವೇಶ್ವರಯ್ಯ ಅವರನ್ನು ದಿವಾನರನ್ನಾಗಿ ನೇಮಿಸುವ ಮೂಲಕ ಹೊಸ ಮನ್ವಂತರಕ್ಕೆ ಅಡಿಪಾಯ ಹಾಕಿದರು. ಆಡಳಿತದಲ್ಲಿ ಹೊಸ ಮಾದರಿಯನ್ನು ಅನುಷ್ಠಾನಗೊಳಿಸಿ ಕಚೇರಿಯ ಕೆಲಸ ಕಾರ್ಯಗಳಲ್ಲಿ ಸುಧಾರಣೆ ತಂದರು. ಅಷ್ಟೇ ಅಲ್ಲದೆ **ದಕ್ಷತೆ ಮತ್ತು ಪ್ರಾಮಾಣಿಕತೆಗೆ ಒತ್ತು** ನೀಡಿದರು. ಸಂಸ್ಥಾನದಲ್ಲಿ ಸ್ಥಳೀಯ ಮಟ್ಟದಲ್ಲಿ ಕೇಂದ್ರೀಕೃತವಾಗಿದ್ದ **ನ್ಯಾಯಾಂಗ ಮತ್ತು ಕಾರ್ಯಾಂಗಗಳ ಅಧಿಕಾರವನ್ನು ಪ್ರತ್ಯೇಕಗೊಳಿಸಿದರು.** ರಾಜ್ಯ ಪ್ರವಾಸ ಮಾಡಿ **ಅಜಮಾಯಿಷಿ ಕಾರ್ಯ** ನಡೆಸಿದರು.

ವಿಶ್ವೇಶ್ವರಯ್ಯ ಅವರು "ಆಧುನಿಕ ಶಿಕ್ಷಣವೇ ಎಲ್ಲ ಸಮಸ್ಯೆಗಳಿಗೂ ಪರಮೋಚ್ಚ ಪರಿಹಾರ"ವೆಂದು ನಂಬಿದ್ದರು. ಶಿಕ್ಷಣವು ಸಂಜೀವಿನಿ ಎಂಬುದನ್ನರಿತಿದ್ದ ಅವರು ಶಿಕ್ಷಣದ ವಿವಿಧ ಯೋಜನೆಗಳನ್ನು ರೂಪಿಸಿದರು. ಅದಕ್ಕಾಗಿ **1913 ರಲ್ಲಿ ಪ್ರಾಥಮಿಕ ಶಿಕ್ಷಣ ನಿಬಂಧನೆ**ಯನ್ನು ಜಾರಿಗೆ ತಂದರು. ಪ್ರೌಢಶಿಕ್ಷಣ ಶಾಲೆಗಳು ಮದ್ರಾಸ್ ವಿಶ್ವವಿದ್ಯಾನಿಲಯದ ನಿಯಂತ್ರಣಕ್ಕೆ ಒಳಪಟ್ಟಿದ್ದವು. ಇದನ್ನು ಬದಲಿಸಿ ಸಂಸ್ಥಾನವೇ ಪ್ರತ್ಯೇಕವಾದ **ಪ್ರೌಢಶಿಕ್ಷಣದ ಅಂತಿಮ ಪರೀಕ್ಷೆ ನಡೆಸುವ ಯೋಜನೆ**ಯನ್ನು ಆರ್ಥಿಕ ಪರಿಷತ್ತಿನ ಮೂಲಕ ರೂಪುಗೊಳಿಸಿದರು. **ಮೈಸೂರು ವಿಶ್ವವಿದ್ಯಾನಿಲಯದ ಸ್ಥಾಪನೆ** ಇವರ ದೂರದೃಷ್ಟಿಯ ಮತ್ತೊಂದು ಫಲಶ್ರುತಿ. **ತಾಂತ್ರಿಕ ಮತ್ತು ವೃತ್ತಿಪರ ಶಿಕ್ಷಣಕ್ಕೆ ಆದ್ಯತೆ** ನೀಡುವುದರ ಜೊತೆಗೆ ಕನ್ನಡ ಬಾಷೆ, ಸಾಹಿತ್ಯ ಮತ್ತು ಸಂಶೋಧನೆಗಳಿಗೆ ಪ್ರೋತ್ಸಾಹ ನೀಡಿದರು.

**"ಕೈಗಾರೀಕರಣ ಇಲ್ಲವೆ ಅವನತಿ'** ಎಬ ಘೋಷಣೆ ಮಾಡಿದ ಅವರು **ಭದ್ರಾವತಿ ಕಬ್ಬಿಣ ಮತ್ತು ಉಕ್ಕಿನ ಕೈಗಾರಿಕೆ** ಸೇರಿದಂತೆ ನೂರಾರು ಕೈಗಾರಿಕೆಗಳನ್ನು ಸ್ಥಾಪಿಸಿದರು. ರಾಜ್ಯದ ಆರ್ಥಿಕ ಚಟುವಟಿಕೆಗಳಿಗೆ ಭದ್ರ ಬುನಾದಿ ಹಾಕುವ ಉದ್ದೇಶದಿಂದ ಹಣಕಾಸು ನೀತಿಯಲ್ಲಿ ಮಾರ್ಪಾಡು ತಂದು ವಿಶ್ವೇಶ್ವರಯ್ಯ ಅವರು ಕ್ರಿ.ಶ. **1913ರಲ್ಲಿ ಮೈಸೂರು ಬ್ಯಾಂಕನ್ನು ಸ್ಥಾಪಿಸಿದರು**. ಕೈಗಾರಿಕೆಗಳ ಅಭಿವೃದ್ಧಿಗೆ **ಫೀಡರ್ ಬ್ಯಾಂಕ್ ಹಾಗೂ ಕೈಗಾರಿಕಾ ಹೂಡಿಕೆ** ಮತ್ತು ಅಭಿವೃದ್ಧಿ ನಿಧಿಗಳು ರಚಿತಗೊಂಡವು. **ಸಾರ್ವಜನಿಕ ಜೀವವಿಮಾ ಯೋಜನೆ** ಜಾರಿಗೆ ತಂದರು. ರೈತರಿಗೆ ಹಾಗೂ ಕರಕುಶಲ ಕೆಲಸಗಾರರಿಗೆ ಸಾಲದ ಸೌಲಭ್ಯ ನೀಡಲು **ಪ್ರಾಂತೀಯ ಸಹಕಾರಿ ಬ್ಯಾಂಕ್**ಗಳನ್ನು ಸ್ಥಾಪಿಸಿದರು. ರಾಜ್ಯದ ಆಸ್ತಿಯನ್ನು ಹೆಚ್ಚಿಸಿ ಆದಾಯ ತರುವುದರ ಮೂಲಕ ಅಭಿವೃದ್ಧಿ ಕಾರ್ಯಗಳ ಪ್ರಭಾವವನ್ನು ಅಳೆಯಲು ಅನುಕೂಲವಾಗುವಂತೆ **ಆಯವ್ಯಯದಲ್ಲಿ ಹೊಸ ದೃಷ್ಟಿಕೋನವನ್ನು ಕಂಡುಕೊಂಡರು**

ವಿಶ್ವೆಶ್ವರಯ್ಯನವರ ಈ ಅವಿರತವಾದ ಕಾರ್ಯದಿಂದ **'ಮೈಸೂರು ಮಾದರಿ'** ಎಂಬ ಹೊಸ ಆಡಳಿತ ಜನ್ಮತಾಳಲು ಕಾರಣರಾದರು ಹಾಗೂ ಮೈಸೂರು ರಾಜಧಾನಿಯಾಗಿ ಮತ್ತು ರಾಜ್ಯದ ಎರಡನೇ ದೊಡ್ಡ ನಗರವಾಗಿ ಪ್ರಸಿದ್ಧಿ ಪಡೆಯಿತು. ಹೀಗೆ ವಿಶ್ವೇಶ್ವರಯ್ಯನವರು 'ಮೈಸೂರು ಮಾದರಿ' ಎಂಬ ಹೊಸ ಆಡಳಿತ ಮಾದರಿ ರೂಪುಗೊಳ್ಳಲು ಅಪಾರ ಸೇವೆಯನ್ನು ಸಲ್ಲಿಸಿದರು.

---

42. **ಪಾಂಡವರನ್ನು ರಕ್ಷಿಸಬೇಕೆಂದು ನಿರ್ಧರಿಸಿದ ಶ್ರೀಕೃಷ್ಣನು ಕರ್ಣನಿಗೆ ಒಡ್ಡಿದ ಆಮಿಷಗಳನ್ನು ಸಂಗ್ರಹಿಸಿ ಬರೆಯಿರಿ.**

❖ ಕಪಟನಾಟಕ ಸೂತ್ರಧಾರಿಯಾದ ಶ್ರೀಕೃಷ್ಣನು ಸಂಧಿಯ ನೆಪದಲ್ಲಿ ದುರ್ಯೋಧನನ ಬಲವನ್ನು ಕುಗ್ಗಿಸುವ ಸಲುವಾಗಿ ಮೊದಲು ವಿದುರನಲ್ಲಿಗೆ ಹೋಗಿ ಆತನು ಯುದ್ಧದಿಂದ ವಿಮುಖವಾಗುವಂತೆ ಮಾಡುತ್ತಾನೆ.ನಂತರ ಕರ್ಣನ ಹತ್ತಿರ ಬಂದ ಶ್ರೀಕೃಷ್ಣನು ಕರ್ಣನಿಗೆ ಹಲವು ಆಸೆ-ಆಮೀಷಗಳನ್ನು ಒಡ್ಡುತ್ತಾನೆ.

"**ಕರ್ಣ ನಿಮಗೂ ಯಾದವ ಕೌರವರಿಗೂ ವಂಶ ಗೌರವದಲ್ಲಿ ಭೇದವಿಲ್ಲ.** ನಿನ್ನಾಣೆ. **ನೀನು ನಿಜವಾಗಿ ಭೂಮಿಯ ಒಡೆಯ**.ಆದರೆ ನಿನಗೆ ಮನದಲ್ಲಿ ಅದರ ಅರಿವಿಲ್ಲ" ಎಂದು ಹೇಳುತ ಕೃಷ್ಣನು ಕರ್ಣನ ಕಿವಿಯಲ್ಲಿ ಭಯವನ್ನು ಬಿತ್ತಿದನು.**ಕುಂತಿಯು ಪಡೆದ ಐದು ಮಂತ್ರಗಳಲ್ಲಿ ಮೊದಲಿಗ ನೀನು,** ನಿನ್ನಯ ನಂತರ ಧರ್ಮರಾಯ, ಮೂರನೆಯಾತ ಕಲಿಭೀಮ, ಅರ್ಜುನನು ನಾಲ್ಕನೆಯ ಮಂತ್ರದಲ್ಲಿ ಜನಿಸಿದರು.ಬಳಿಕ ಐದನೆಯ ಮಂತ್ರದಲ್ಲಿ ಮಾದ್ರಿಯಲ್ಲಿ ನಕುಲ ಸಹದೇವರು ಇಬ್ಬರು ಹುಟ್ಟಿದರು. ಎಂದು ಕೃಷ್ಣನು, ಕರ್ಣನ ಹುಟ್ಟಿನ ಗುಟ್ಟನ್ನು ಹೇಳಿದನು.

"ಎಲೈ ಕರ್ಣನೆ ನಿನಗೆ ಹಸ್ತಿನಾಪುರದ ರಾಜ್ಯದ ರಾಜನನ್ನಾಗಿ ಮಾಡುವೆನು**ಪಾಂಡವ ರಾಜರು, ಕೌರವ ರಾಜರು ನಿನ್ನ ಪೀಠವನ್ನು ಓಲೈಸುತ್ತಾರೆ.** ನಿನಗೆ ಈ ಎರಡು ವಂಶಗಳು ಸೇವೆ ಮಾಡುತ್ತಾರೆ. ಇದನ್ನು ಬಿಟ್ಟು ನೀನು ದುರ್ಯೋಧನನ ಬಾಯೆಂಜಲಿಗೆ ಕೈಚಾಚುವುದು ಸರಿಯೇ". **ಎಡಭಾಗದಲ್ಲಿ ಕೌರವೇಂದ್ರ ಸಮೂಹ, ಬಲಭಾಗದಲ್ಲಿ ಪಾಂಡು ಮಕ್ಕಳಸಮೂಹ,** ಮುಂದುಗಡೆ ಮಾದ್ರ ಮಾಗದ ಯಾದವಾದಿಗಳು ಮಧ್ಯದಲ್ಲಿ ನೀನು ರಾಜಸಭೆಯಲ್ಲಿ ಪ್ರಕಾಶಿಸುವ ವಿಶೇಷ ಸೊಬಗನ್ನು ತೊರೆದು, ದುರ್ಯೋಧನ ನುಡಿಸಲು 'ಒಡೆಯ ಅನುಗ್ರಹವಾಗಲಿ' ಎಂಬುದು ನಿನಗೆ ಕಷ್ಟವಾಗುವುದಿಲ್ಲವೇ?"ಎಂದು ಆಮಿಷ ಒಡ್ಡಿದನು.

ಹೀಗೆ ಧರ್ಮಪಕ್ಷಪಾತಿಯಾದ ಕೃಷ್ಣನು ಭೇದತಂತ್ರವನ್ನು ಬಳಸಿ ಕರ್ಣನಿಗೆ ಜನ್ಮರಹಸ್ಯವನ್ನು ಹೇಳುವುದಲ್ಲದೇ ಆತನನ್ನು ಪ್ರಲೋಭನೆಗೆ ಒಳಪಡಿಸುವುದು ಇಲ್ಲಿ ಸ್ವಾರಸ್ಯಪೂರ್ಣವಾಗಿ ವ್ಯಕ್ತವಾಗಿದೆ.

**ಅಥವಾ**

-***ಪಾಂಡವರು ಸೋದರರೆಂದು ತಿಳಿದಾಗ ಕರ್ಣನ ಮನಸ್ಥಿತಿಯನ್ನು ನಿಮ್ಮ ಮಾತುಗಳಲ್ಲಿ ಬರೆಯಿರಿ?***

❖ ಕಪಟನಾಟಕ ಸೂತ್ರಧಾರಿಯಾದ ಶ್ರೀಕೃಷ್ಣನು ಸಂಧಿಯ ನೆಪದಲ್ಲಿ ದುರ್ಯೋಧನನ ಬಲವನ್ನು ಕುಗ್ಗಿಸುವ ಸಲುವಾಗಿ ಕರ್ಣನಿಗೆ ಹಲವು ಆಸೆ-ಆಮೀಷಗಳನ್ನು ಒಡ್ಡುತ್ತಾನೆ. ಆಗ ಕೃಷ್ಣನ ಮನಸ್ಥಿತಿ 'ಹಲ್ಲುಕಿತ್ತ ಹಾವಿನಂತಾಗಿತ್ತು'.

ಕೃಷನು ಕರ್ಣನಿಗೆ ಆಮಿಷಗಳನ್ನು ಒಡ್ಡಿದಾಗ **ಕೊರಳಸೆರೆ ಹಿಗ್ಗಿದವು, ಕಂಬನಿಯು ರಭಸದಿಂದ ಮುಂದೆ ಬಂದು,ಅಧಿಕವಾಗಿ ಕರ್ಣನು ದುಃಖಗೊಂಡು ಮನದೊಳಗೆ "ಅಯ್ಯೋ, ದುರ್ಯೋಧನನಿಗೆ ಕೇಡಾದುದು"** ಎಂದನು. ಹರಿಯ ಹಗೆತನವು ಹೊಗೆ ತೋರದೆ ಸುಟ್ಟುಹಾಕುವುದಲ್ಲದೆ; ಸುಮ್ಮನೆ ಹೋಗುವುದೆ.ಕೃಷ್ಣನು "ನನ್ನ ವಂಶದ ರಹಸ್ಯವನ್ನು

ತಿಳಿಸಿ ನನ್ನನ್ನು ಕೊಂದನು" ಎಂದು ಮನದಲ್ಲಿ ನೊಂದುಕೊಂಡನು."ನಾನು ರಾಜ್ಯದ ಸಿರಿಸಂಪತ್ತಿಗೆ ಸೋಲುವವನಲ್ಲ,ಪಾಂಡವರು ಕೌರವರು ಸೇವೆಯನ್ನು ಮಾಡುವುದು ನನಗೆ ಇಷ್ಟವಿಲ್ಲ. ಆದರೆ ನನ್ನನ್ನು ಕಾಪಾಡಿದ ಒಡೆಯನಾದ ದುರ್ಯೋಧನನಿಗೆ ಶತ್ರುಗಳ ಶಿರವನ್ನು ಕಡಿದು ತಂದು ಒಪ್ಪಿಸುವ ಆವೇಶದಲ್ಲಿ ಇದ್ದೆನು. ಆದರೆ ನೀನು ನನ್ನ ಜನ್ಮರಹಸ್ಯವನ್ನು ತಿಳಿಸಿ ದುರ್ಯೋಧನನ ಕೊಂದೆ.

ವೀರ ದುರ್ಯೋಧನನೇ ಒಡೆಯನು. ಆತನ ಹಗೆಯೆ ಹಗೆ, ಅಭಿಮಾನವೇ ಅಭಿಮಾನವು, ದುರ್ಯೋಧನ ಆದಂತೆ ಆಗುವೆನು.ಕೃಷ್ಣ ಕೇಳು, ನಾಳೆ ಸಮರದ ವಿಷಯದಲ್ಲಿ ಪಾಂಡವರಲ್ಲಿ ನಿಜಪರಾಕ್ರಮದ ಶ್ರೇಷ್ಠತನವನ್ನು ತೋರುವೆನು. ನಾಳಿನ ಕೌರವರ ಮತ್ತು ಪಾಂಡವರ ಚತುರಂಗ ಬಲದ ನಡುವಿನ ಯುದ್ಧವು ಮೃತ್ಯುದೇವತೆಗೆ ಭೋಜನ ಕೂಟ ಆಗುವುದು. ನಾನು ಕೌರವನ ಉಪಕಾರದ ಋಣ ತೀರಿಸುವಂತೆ ಹೋರಾಡಿ,ಯುದ್ಧರಂಗದಲ್ಲಿ ಲೆಕ್ಕವಿಲ್ಲದಷ್ಟು ವೀರಯೋಧರ ಕೊಂದು, ನನ್ನ ಒಡೆಯನಿಗಾಗಿ ಪ್ರಾಣವನ್ನು ಬಿಡುವೆನು. ಸೂರ್ಯನಮೇಲಾಣೆ ಪಾಂಡವರನ್ನು ನೋಯಿಸೆನು" ಎಂದನು.

---

**XIII. ಕೆಳಗಿನ ಗದ್ಯಭಾಗವನ್ನು ಮನಸ್ಸಿನಲ್ಲಿ ಓದಿಕೊಂಡು, ಕೊಟ್ಟಿರುವ ಪ್ರಶ್ನೆಗಳಿಗೆ ಉತ್ತರ ಬರೆಯಿರಿ. 1*4=4 (2+2)**

43. ಭೂಮಿ ಒಂದು ಜಲಪಾತ್ರೆ ಮಾತ್ರ. ಅದುವೇ ನೀರಿನ ಮೂಲ ಅಲ್ಲ. ಬಿದ್ದ ಮಳೆನೀರು ಈ ಪಾತ್ರೆಯಲ್ಲಿ ಚೆನ್ನಾಗಿ ತುಂಬಿದರೆ ಮುಂದಿನ ಬೇಸಿಗೆಗೂ ತೊಂದರೆ ಇರದು. ಹೀಗಾಗಬೇಕಾದರೆ ಮಳೆಯನ್ನು ತಡೆಯುವ ತಡೆಗಳು ಬೇಕು. ಕಾಡು ಒಂದು ಅತ್ಯುತ್ತಮ ನೈಸರ್ಗಿಕ ಬಹುಹಂತಗಳ ತಡೆ. ಕಾಡೇ ನದಿಗಳ ತಾಯಿ. ಇಂತಹ ಪ್ರಾಕೃತಿಕ ಮತ್ತು ಪೂರ್ವಜರು ಮಾಡಿಟ್ಟ ಕೆರೆ, ಮದಕ, ಒಡ್ಡುಗಳಂತಹ ತಡೆಗಳನ್ನು ನಾವಿಂದು ನಾಶಗೊಳಿಸಿದ ಕಾರಣ ಮಳೆಗಾಲದಲ್ಲಿ ಭೂಮಿಯ ಒಡಲು ತುಂಬುವುದಿಲ್ಲ.

ಬಿದ್ದ ಮಳೆನೀರು ಅತ್ಯಮೂಲ್ಯವಾದ ಮೇಲ್ಮಣ್ಣನ್ನು ಕೊಚ್ಚಿಕೊಂಡು ಹೋಗಿ ನಮ್ಮ ಜಲಮೂಲಗಳಿಗೆ ತುಂಬುತ್ತಿದೆಯಲ್ಲ. ಅಲ್ಲಿ ಅದು ಹೂಳಾಗಿ ತಳದಲ್ಲಿ ಉಳಿದಾಗ ಬಿದ್ದ ಮಳೆನೀರಿನ ಶೇಖರಣೆ ಮತ್ತು ಭೂಗರ್ಭಕ್ಕೆ ಇಳಿಸುವ ಕಾರ್ಯಕ್ಕೆ ಅಂತರ್ಜಲ ಮರುಪೂರಣ ಕುಂದು ಬರುತ್ತದೆ. ಜಲಮಟ್ಟ ಪ್ರತಿವರ್ಷ ಕುಸಿಯುತ್ತದೆ. ಅರಣ್ಯನಾಶದಂತಹ ತಪ್ಪು ಮಾಡಿದ ಕಾರಣ ನಾವೇ ಇಂದು ಪ್ರಜ್ಞಾಪೂರ್ವಕವಾಗಿ ಮಳೆಕೊಯ್ಲು ಮಾಡಬೇಕಿದೆ. ನಮ್ಮ ಮಣ್ಣು ಒಂದು ಸ್ಪಂಜಿನಂತೆ. ಮಳೆಗಾಲದಲ್ಲಿ ಬಿದ್ದ ಮಳೆಯೆಲ್ಲಾ ಭೂಮಿಯ ಮೇಲಿನಿಂದಲೇ ಹರಿದೋಡುತ್ತದೆ. ಅದನ್ನು ನಾವು ಬೇರೆ ಬೇರೆ ಕ್ರಮದಿಂದ ಮಣ್ಣಿನೊಳಕ್ಕೆ ಇಳಿಸಿ ಬಿಟ್ಟರೆ ಈ ಸ್ಪಂಜು ಒದ್ದೆಯಾಗುತ್ತದೆ. ಅದು ನಿಧಾನವಾಗಿ ತಾನು ಹೀರಿಕೊಂಡದ್ದರ ಸ್ವಲ್ಪಾಂಶ ನೀರನ್ನು ಬಿಟ್ಟು ಕೊಡುತ್ತದೆ. ಹೀಗೆ ಬಿಟ್ಟುಕೊಟ್ಟ ನೀರು ಅಂತರ್ಜಲ ಮಟ್ಟವನ್ನು ಹೆಚ್ಚಿಸುತ್ತದೆ. ನಮ್ಮ ಜಲಮೂಲದಲ್ಲೂ ನೀರು ಜಾಸ್ತಿಯಾಗುತ್ತದೆ.

ನಮ್ಮ ಸುತ್ತಮುತ್ತಲಿನವರೆಲ್ಲಾ ಬಾವಿ ಬತ್ತಿದರೆ ಕೊಳವೆ ಬಾವಿ ತೋಡುವುದೊಂದೇ ದಾರಿ ಎನ್ನುತ್ತಿದ್ದಾರೆ. ಅದು ಸರಿಯಲ್ಲ. ಹಾಗೆ ನೋಡಿದರೆ ಕೊಳವೆ ಬಾವಿ ಕೊರೆಯುವುದರಲ್ಲಿ ಸಾಮಾಜಿಕ ನ್ಯಾಯ ಇಲ್ಲ. ಅದು ಕೆಲವೊಮ್ಮೆ ಇತರರಿಗೆ ತೊಂದರೆ ಮಾಡುವುದಿದೆ. ಕೊಳವೆ ಬಾವಿ ಕೊರೆಯುವುದು ನಮ್ಮ ಕಟ್ಟಕಡೆಯ ಮಾರ್ಗವಾಗಬೇಕು. ಕಡಿಮೆ ವೆಚ್ಚದ, ಹೆಚ್ಚುಕಾಲ ಬಾಳುವ, ನಮ್ಮ ಮಕ್ಕಳ ಕಾಲಕ್ಕೂ ನೀರು ಉಳಿಸಬಲ್ಲ ಮಳೆಕೊಯ್ಲಿನಂತಹ ಉಪಾಯಗಳನ್ನು ನಾವು ಪ್ರಯೋಗಿಸಬೇಕು.

***ಪ್ರಶ್ನೆಗಳು :***

**ಅ) ಅಂತರ್ಜಲಮಟ್ಟ ಹೇಗೆ ಹೆಚ್ಚುತ್ತದೆ?**

ಬಿದ್ದ ಮಳೆನೀರು ಅತ್ಯಮೂಲ್ಯವಾದ ಮೇಲ್ಮಣ್ಣನ್ನು ಕೊಚ್ಚಿಕೊಂಡು ಹೋಗಿ ನಮ್ಮ ಜಲಮೂಲಗಳಿಗೆ ತುಂಬುತ್ತಿದೆಯಲ್ಲ. ಅಲ್ಲಿ ಅದು ಹೂಳಾಗಿ ತಳದಲ್ಲಿ ಉಳಿದಾಗ ಬಿದ್ದ ಮಳೆನೀರಿನ ಶೇಖರಣೆ ಮತ್ತು ಭೂಗರ್ಭಕ್ಕೆ ಇಳಿಸುವ ಕಾರ್ಯಕ್ಕೆ ಅಂತರ್ಜಲ ಮರುಪೂರಣ ಕುಂದು ಬರುತ್ತದೆ. ಜಲಮಟ್ಟ ಪ್ರತಿವರ್ಷ ಕುಸಿಯುತ್ತದೆ. ಅರಣ್ಯನಾಶದಂತಹ ತಪ್ಪು ಮಾಡಿದ ಕಾರಣ ನಾವೇ ಇಂದು ಪ್ರಜ್ಞಾಪೂರ್ವಕವಾಗಿ ಮಳೆಕೊಯ್ಲು ಮಾಡಬೇಕಿದೆ. ನಮ್ಮ ಮಣ್ಣು ಒಂದು ಸ್ಪಂಜಿನಂತೆ. ಮಳೆಗಾಲದಲ್ಲಿ ಬಿದ್ದ ಮಳೆಯೆಲ್ಲಾ ಭೂಮಿಯ ಮೇಲಿನಿಂದಲೇ ಹರಿದೋಡುತ್ತದೆ. ಅದನ್ನು ನಾವು ಬೇರೆ ಬೇರೆ ಕ್ರಮದಿಂದ ಮಣ್ಣಿನೊಳಕ್ಕೆ ಇಳಿಸಿ ಬಿಟ್ಟರೆ ಈ ಸ್ಪಂಜು ಒದ್ದೆಯಾಗುತ್ತದೆ. ಅದು ನಿಧಾನವಾಗಿ ತಾನು ಹೀರಿಕೊಂಡದ್ದರ ಸ್ವಲ್ಪಾಂಶ ನೀರನ್ನು ಬಿಟ್ಟು ಕೊಡುತ್ತದೆ. ಹೀಗೆ ಬಿಟ್ಟುಕೊಟ್ಟ ನೀರು ಅಂತರ್ಜಲ ಮಟ್ಟವನ್ನು ಹೆಚ್ಚಿಸುತ್ತದೆ. ನಮ್ಮ ಜಲಮೂಲದಲ್ಲೂ ನೀರು ಜಾಸ್ತಿಯಾಗುತ್ತದೆ.

**ಬ) ಮಳೆಗಾಲದಲ್ಲಿ ಭೂಮಿಯ ಒಡಲು ಏಕೆ ತುಂಬುವುದಿಲ್ಲ?**

❖ ಸಾಮಾನ್ಯ ಅರ್ಥದಲ್ಲಿ ಸತ್ಯ ಎಂದರೆ ಸುಳ್ಳು ಹೇಳದಿರುವುದು ಎಂಬ ಪರಿಕಲ್ಪನೆ ಬೆಳೆದಿದೆ. ವಾಸ್ತವವಾಗಿ ಸತ್ಯ ಎಂಬ ಪರಿಕಲ್ಪನೆಯು ಅದಕ್ಕಿಂತ ಮಿಗಿಲಾದ ಸ್ಥಾನವನ್ನು ಹೊಂದಿದೆ. ಸತ್ಯ ಎಂದರೆ ಇರುವಿಕೆ. ಸತ್ಯವಿದ್ದಲ್ಲಿ ಶುದ್ಧ ಜ್ಞಾನವಿರುತ್ತದೆ. ಸತ್ಯವಿಲ್ಲದ, ಶುದ್ಧ ಜ್ಞಾನದ ಸಂಭವವೇ ಇಲ್ಲ. ಸತ್ಯ, ಆತ್ಮ, ಮನಸ್ಸು ಮಾತಿನಲ್ಲಿದ್ದಾಗ ಕರ್ಮದಲ್ಲಿ ವರ್ಧಿಸುತ್ತದೆ. ಸತ್ಯದ ಕೃತಿ ರೂಪವೇ ಸದ್ವರ್ತನೆ. ನುಡಿ ಸತ್ಯವಾದರೆ, ನಡೆ ಸದ್ವರ್ತನೆ. ನುಡೆ ನುಡಿ ಒಂದಾದರೆ ಬಾಳು ಹಸನಾಗುತ್ತವೆ. ಸತ್ಯವೇ ಗುರಿ, ಅಹಿಂಸೆಯೇ ಸಾಧನ. ಜೀವನದಲ್ಲಿ ಸತ್ಯಕ್ಕೆ ಅಗ್ರಸ್ಥಾನವಿದೆ. ಜೀವನದಲ್ಲಿ ಸತ್ಯ ಸಾಧನೆಗೆ ಅಹಿಂಸೆಯು ಕಾರ್ಯ ಸಾಧಕವಾಗಿರುತ್ತದೆ.

---

**XIV. ಕೆಳಗಿನ ಯಾವುದಾದರೂ ಒಂದಕ್ಕೆ ಕೊಟ್ಟಿರುವ ಮಾಹಿತಿಯನ್ನು ಆಧರಿಸಿ ಪತ್ರ ಬರೆಯಿರಿ. 1*5=5**

**44. ನಿಮ್ಮನ್ನು ಉಡುಪಿಯ ಸರ್ಕಾರಿ ಪ್ರೌಢಶಾಲೆಯ 'ಅವಿನಾಶ' ಎಂದು ಭಾವಿಸಿಕೊಂಡು, ಶಾಲೆಯಲ್ಲಿ 'ಮಳೆಕೊಯ್ಲು ತೊಟ್ಟಿ' ನಿರ್ಮಿಸುವಂತೆ ಕೋರಿ ನಗರಸಭೆ ಆಯುಕ್ತರಿಗೆ ಪತ್ರವನ್ನು ಬರೆಯಿರಿ.**

**ಇವರಿಂದ,**
ಅವಿನಾಶ
10ನೇ ತರಗತಿ
ಸರ್ಕಾರಿ ಪ್ರೌಢಶಾಲೆ ಉಡುಪಿ

ಸ್ಥಳ : ಉಡುಪಿ
ದಿನಾಂಕ : 25/02/2025

**ಇವರಿಗೆ,**
ಮಾನ್ಯ ಆಯುಕ್ತರು
ನಗರ ಸಭೆ ಉಡುಪಿ
ಉಡುಪಿ ಜಿಲ್ಲೆ–581421

**ಮಾನ್ಯರೇ,**

**ವಿಷಯ :** ಮಳೆ ಕೊಯ್ಲು ತೊಟ್ಟಿ ನಿರ್ಮಿಸುವಂತೆ ಕೋರಿ.

ಈ ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ ಅವಿನಾಶ ಎಂಬ ನಾನು ಸರಕಾರಿ ಪ್ರೌಢಶಾಲೆ ಉಡುಪಿಯಲ್ಲಿ 10ನೇ ತರಗತಿಯಲ್ಲಿ ಅಭ್ಯಾಸ ಮಾಡುತ್ತಿದ್ದೇನೆ. ಇತ್ತೀಚೆಗೆ ಕಾಡುಗಳ ನಾಶದಿಂದ ಮಳೆ ಕಡಿಮೆಯಾಗಿ ಅಂತರ್ಜಲ ಪ್ರಮಾಣ ಕಡಿಮೆಯಾಗುತ್ತಿದೆ. ಇದರಿಂದ ಪ್ರತಿ ಬೇಸಿಗೆಯಲ್ಲೂ ನಮ್ಮ ಶಾಲೆಯಲ್ಲಿ ಕುಡಿಯುವ ನೀರಿನ ಮತ್ತು ಶೌಚಾಲಯಕ್ಕೆ ಅಗತ್ಯ ನೀರಿನ ಅಭಾವ ಉಂಟಾಗುತ್ತಿದೆ. ಶಿಕ್ಷಕರು ಸೇರಿದಂತೆ ಎಲ್ಲ ವಿದ್ಯಾರ್ಥಿಗಳಿಗು ಕಷ್ಟವಾಗುತ್ತಿದೆ. ಆದ್ದರಿಂದ ತಾವುಗಳು ಮಳೆ ನೀರು ವ್ಯರ್ಥವಾಗಿ ಹರಿದು ಹೋಗದೆ, ನಮ್ಮ ಶಾಲೆಯ ನೀರಿನ ಮೂಲಕ್ಕೆ ಅನುಕೂಲವಾಗುವಂತೆ ಅಂತರ್ಜಲದ ಪ್ರಮಾಣ ಹೆಚ್ಚಾಗಲು ನಿಮ್ಮ ಯಾವುದಾದರು ಒಂದು ಯೋಜನೆಯಲ್ಲಿ ನಮ್ಮ ಶಾಲೆಗೆ ಮಳೆ ಕೊಯ್ಲು ತೊಟ್ಟಿಯನ್ನು ನಿರ್ಮಾಣ ಮಾಡಿಕೊಡಬೇಕೆಂದು ಈ ಮೂಲಕ ನನ್ನೆಲ್ಲ ಸ್ನೇಹಿತರು ಮತ್ತು ಶಿಕ್ಷಕರ ಪರವಾಗಿ ತಮ್ಮಲ್ಲಿ ವಿನಂತಿಸಿಕೊಳ್ಳುತ್ತೇನೆ.

**ಧನ್ಯವಾದಗಳೊಂದಿಗೆ,**

**ಇತಿ ತಮ್ಮ ವಿಶ್ವಾಸಿ,**
***ಅವಿನಾಶ***

**ಇವರಿಗೆ,**
ಮಾನ್ಯ ಆಯುಕ್ತರು
ನಗರ ಸಭೆ ಉಡುಪಿ
ಉಡುಪಿ ಜಿಲ್ಲೆ–581421

**ಅಥವಾ**

**–ನಿಮ್ಮನ್ನು ಮಂಗಳೂರಿನ ಸರ್ಕಾರಿ ಪ್ರೌಢಶಾಲೆಯ 'ನೇಹ' ಎಂದು ಭಾವಿಸಿಕೊಂಡು, ಶಾಲಾವಾರ್ಷಿಕೋತ್ಸವಕ್ಕೆ ಆಹ್ವಾನಿಸಿ ಹುಬ್ಬಳ್ಳಿಯಲ್ಲಿ ವಾಸವಿರುವ 'ಜ್ಯೋತಿ' ಎಂಬ ಹೆಸರಿನ ತಾಯಿಗೆ ಪತ್ರವನ್ನು ಬರೆಯಿರಿ.**

**ಕ್ಷೇಮ**

**ಇವರಿಂದ,**
ನೇಹ
10ನೇ ತರಗತಿ
ಸರ್ಕಾರಿ ಪ್ರೌಢಶಾಲೆ ಮಂಗಳೂರು
25/12/2024

**ಪೂಜ್ಯ ಮಾತೃಶ್ರೀಯವರಿಗೆ,**

ನಿಮ್ಮ ಮಗಳಾದ ನೇಹ ಮಾಡುವ ಶಿರಸಾಷ್ಟಾಂಗ ದೀರ್ಘದಂಡ ನಮಸ್ಕಾರಗಳು.ಇಲ್ಲಿ ನಾನು ಆರೋಗ್ಯದಿಂದ ಇದ್ದೇನೆ. ನೀವು ಸಹ ಆರೋಗ್ಯವಾಗಿರುವಿರೆಂದು ತಿಳಿದುಕೊಂಡಿದ್ದೇನೆ. ಹಾಗೆಯೇ ನನ್ನ ವಿದ್ಯಾಭ್ಯಾಸವು ಸಹ ಉತ್ತಮವಾಗಿ ನಡೆಯುತ್ತಿದೆ.

ಈ ಪತ್ರವನ್ನು ಬರೆಯಲು ಕಾರಣವೇನೆಂದರೆ. ನಮ್ಮ ಶಾಲೆಯಲ್ಲಿ ದಿನಾಂಕ 3ನೇ ಜನೇವರಿ, 2025 ರಂದು 'ಶಾಲಾ ವಾರ್ಷಿಕೋತ್ಸವ'ವನ್ನು ಹಮ್ಮಿಕೊಳ್ಳಲಾಗುವುದು ನಮ್ಮ ಮುಖ್ಯೋಪಾಧ್ಯಯರ ಮುಂದಾಳತ್ವದಲ್ಲಿ ಎಸ್.ಡಿ.ಎಮ್.ಸಿ ಅಧ್ಯಕ್ಷರು ಮತ್ತು ಸರ್ವ ಸದಸ್ಯರ ಸಹಕಾರದಿಂದ ಎಲ್ಲಾ ಶಿಕ್ಷಕರು, ವಿದ್ಯಾರ್ಥಿಗಳು 'ಶಾಲಾ ವಾರ್ಷಿಕೋತ್ಸವ' ಕಾರ್ಯಕ್ರಮದಲ್ಲಿ ಸಕ್ರೀಯವಾಗಿ ಭಾಗವಹಿಸಿ ಕಾರ್ಯಕ್ರಮದ ಸಿದ್ಧತೆಯನ್ನು ಮಾಡುತ್ತಿದ್ದಾರೆ. ವಾರ್ಷಿಕೋತ್ಸವದ ಅಂಗವಾಗಿ ವಾರ್ಷಿಕ ಕ್ರೀಡಾಕೂಟ, ರಸಪ್ರಶ್ನೆ, ಪ್ರಬಂಧ, ಭಾಷಣ ಸ್ಪರ್ಧೆಗಳನ್ನು ಏರ್ಪಡಿಸಿದ್ದರು. ಕೆಲವು ಸ್ಪರ್ಧೆಗಳಲ್ಲಿ ನಾನು ಸಹ ಭಾಗವಹಿಸಿ ಬಹುಮಾನಗಳನ್ನು ಪಡೆದಿದ್ದೇನೆ ಎಂದು ಹೇಳಲು ನನಗೆ ಹೆಮ್ಮೆ ಎನಿಸುತ್ತದೆ. ಅಲ್ಲದೇ ನಾಟಕ, ನೃತ್ಯ, ಹಾಡು ಸೇರಿದಂತೆ ಹಲವಾರು ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಏರ್ಪಡಿಸಲಾಗಿದೆ. ಆದ್ದರಿಂದ ಅಮ್ಮ ನೀನು, ಅಪ್ಪ ಮತ್ತು ತಂಗಿಯನ್ನು ಕರೆದುಕೊಂಡು ಕರ್ಯಕ್ರಮಕ್ಕೆ ಬರಬೇಕೆಂದು ಆಶಿಸುತ್ತೇನೆ. ಹಾಗೆಯೇ ನನ್ನ ವಿದ್ಯಾಭ್ಯಾಸದ ಕಡೆಗೂ ಗಮನ ನೀಡುತ್ತಿದ್ದೇನೆ.

ಈ ಎಲ್ಲ ವಿಷಯವನ್ನು ಪಿತೃಶ್ರೀಯವರಿಗೂ ಹೇಳಿ, ನನ್ನ ನಮಸ್ಕಾರಗಳನ್ನು ತಿಳಿಸಿ.

**ನಮಸ್ಕಾರಗಳೊಂದಿಗೆ,**

**ಇತಿ ತಮ್ಮ ಪ್ರೀತಿಯ ಮಗಳು**
**ನೇಹ**

**ಇವರಿಗೆ,**
ಜ್ಯೋತಿ
ನವನಗರ
ಹುಬ್ಬಳ್ಳಿ–581421

---

**XV. ಕೆಳಗಿನ ಯಾವುದಾದರೂ ಒಂದು ವಿಷಯದಲ್ಲಿ ಹದಿನೈದು ವಾಕ್ಯಗಳಿಗೆ ಕಡಿಮೆಯಿಲ್ಲದಂತೆ ಪ್ರಬಂಧವನ್ನು ಬರೆಯಿರಿ.** **1*5=5**


## 45.ಸಾಮಾಜಿಕ ಪಿಡುಗುಗಳು

❖ **ಪೀಠಿಕೆ:**

ಇಂದು ಮಾನವನಿಗೆ ಅತಿ ಅವಶ್ಯಕವಿರುವ ಪರಿಸರ ಹಾಳಾಗುತ್ತಿರುವುದಕ್ಕೆ ವಿವಿಧ ಕಾರಣಗಳಿದ್ದು ಅದರಲ್ಲಿ ಮುಖ್ಯವಾದ ಕಾರಣ ಮಿತಿಮೀರಿದ ಜನಸಂಖ್ಯೆ. ಇದನ್ನಾಧರಿಸಿ ಹುಟ್ಟುವ ಸಮಸ್ಯೆಗಳಲ್ಲಿ 'ಸಾಮಾಜಿಕ ಪಿಡುಗುಗಳು' ಮುಖ್ಯವಾಗಿವೆ. " ಸಮಾಜದ ಪ್ರಗತಿಗೆ ಅಥವಾ ವ್ಯಕ್ತಿಯ ವ್ಯಕ್ತಿತ್ವದ ವಿಕಸನಕ್ಕೆ ಅಡ್ಡಿಯನ್ನು ಉಂಟುಮಾಡುವ ಶಕ್ತಿಗಳನ್ನು 'ಸಾಮಾಜಿಕ ಪಿಡುಗುಗಳು' ಎನ್ನುವರು. ಸಮಾಜ ಕಲುಷಿತವಾಗಲು ದಾರಿಮಾಡಿಕೊಡುವ ಇವುಗಳಿಂದ ಸಾಮಾಜಿಕ ಸ್ವಾಸ್ಥ್ಯ ಹಾಳಾಗುವುದಲ್ಲದೆ ದೇಶದ ಅಭಿವೃದ್ಧಿ ಕುಂಠಿತವಾಗಲು ಕಾರಣವಾಗುತ್ತವೆ. ಅಂತಹ ಸಾಮಾಜಿಕ ಪಿಡುಗುಗಳ ಕುರಿತು ಇಂದು ನಾವು ಸಂಕ್ಷಿಪ್ತವಾಗಿ ತಿಳಿದುಕೊಳ್ಳೋಣ.

**ವಿಷಯ ನಿರೂಪಣೆ:**

**ಸಾಮಾಜಿಕ ಪಿಡುಗುಗಳು** :



ಸಾಮಾಜಿಕ ಪಿಡುಗುಗಳಲ್ಲಿ ಮುಖ್ಯವಾದವುಗಳೆಂದರೆ–**'ಬಡತನ, ನಿರುದ್ಯೋಗ, ಅಜ್ಞಾನ, ಅನಕ್ಷರತೆ, ಜಾತೀಯತೆ, ಸ್ತ್ರೀಶೋಷಣೆ, ಮಾದಕವಸ್ತುಗಳ ಸೇವನೆ'** ಮೊದಲಾದವುಗಳು. ಅಜ್ಞಾನಕ್ಕೆ ಅನಕ್ಷರತೆಯೇ ಮುಖ್ಯ ಕಾರಣ. ಅಜ್ಞಾನ ಮತ್ತು ಅನಕ್ಷರತೆಗಳು 'ಒಂದು ನಾಣ್ಯದ ಎರಡು ಮುಖಗಳಿದ್ದಂತೆ' ಅಜ್ಞಾನವು ಸಮಾಜವನ್ನು ಅಧ:ಪತನದತ್ತ ಕೊಂಡೊಯ್ಯುತ್ತದೆ. ಇವೆರಡು ಇದ್ದ ಕಡೆಗೆ **–'ಬಡತನ ಮತ್ತು ನಿರುದ್ಯೋಗ** ಸಮಸ್ಯೆಗಳು ತಲೆದೋರುತ್ತವೆ. ನಮ್ಮದೇಶವು ಪುರುಷ ಪ್ರಧಾನ ರಾಷ್ಟ್ರವಾಗಿರುವುದರಿಂದ ಸ್ತ್ರೀ ಭ್ರೂಣಹತ್ಯೆ, ದೇವದಾಸಿ ಪದ್ದತಿ, ವೇಶ್ಯಾವಾಟಿಕೆ ಮುಂತಾದ ರೂಪದಲ್ಲಿ ಸ್ತ್ರೀಶೋಷಣೆ ಮಾಡುತ್ತಿದ್ದಾರೆ.

ಇಂದು ಜಾತೀಯತೆಯು ಅಖಂಡವಾದ ಭಾರತಕ್ಕೆ ಧಕ್ಕೆಯನ್ನುಂಟುಮಾಡುತ್ತಿದೆ. ಇದರಿಂದ ಜನತೆಯಲ್ಲಿ ಅಶಾಂತಿ, ದ್ವೇಷ, ಅರಾಜಕತೆ ಉಂಟಾಗಿ ಐಕ್ಯತೆಗೆ ಧಕ್ಕೆ ಉಂಟಾಗುತ್ತಿದೆ.ಅಸ್ಪೃಶ್ಯತೆಯು ನಮ್ಮ ಸಮಜಕ್ಕೆ ಅಂಟಿಕೊಂಡಿರುವ ಘೋರಶಾಪವಾಗಿದೆ. ಜಾತಿಪದ್ದತಿಯ ಅವಿಭಾಜ್ಯ ಅಂಗವಾಗಿ ಬೆಳೆದುಬಂದುರುವ ಇದು ಸುಲಭವಾಗಿ ನಿರ್ಮೂಲನೆ ಮಾಡಲಾಗದ ಅಂಟುರೋಗವಾಗಿದೆ.

**ನಿವಾರಣೋಪಾಯಗಳು :**

- ಯುವಕ–ಯುವತಿಯರು ಮಾದಕ ಪೇಯಗಳ ಹಾನಿಯನ್ನು ಜನರಿಗೆ ತಿಳಿಸುವುದು. ಅವುಗಳ ಉತ್ಪಾದನೆ ಮತ್ತು ಮಾರಾಟವನ್ನು ನಿಷೇಧಿಸುವುದು.
- ಜನಸಂಖ್ಯಾ ಸ್ಫೋಟವನ್ನು ತಡೆಗಟ್ಟುವುದರಿಂದ ಬಡತನ ದಾರಿದ್ರ್ಯವನ್ನು ಕಡಿಮೆಮಾಡಬಹುದು.
- ಸ್ತ್ರೀಶೋಷಣೆಯನ್ನು ನಿಲ್ಲಿಸಬೇಕಾದರೆ ,ಸ್ತ್ರೀಯರಿಗೆ ಯೋಗ್ಯ ಶಿಕ್ಷಣ ನೀಡಬೇಕು.ಸ್ತ್ರೀಯರಿಗೆ ಪುರುಷರಷ್ಟೆ ಸಮಾನ ಸ್ಥಾನ ಸಿಗುವಂತಾಗಬೇಕು.
- ಜಾತೀಯತೆಯನ್ನು ಹೋಗಲಾಡಿಸಲು ಶಿಕ್ಷಣ ಸಂಸ್ಥೆಗಳು ,ಧಾರ್ಮಿಕ ಸಂಘಗಳು ಮಾನವೀಯತೆಯನ್ನು ಬೆಳೆಸುವ ಕಾರ್ಯಕ್ರಮಗಳನ್ನು ಏರ್ಪಡಿಸಬೆಕು.

**ಉಪಸಂಹಾರ :**

ಸಮಾಜದ ಹಿತವೇ ತನ್ನ ಹಿತವೆಂದು ಬದುಕಬೇಕಾದ ಮಾನವನು ಇಂದು ಸಾಮಾಜಿಕ ಪಿಡುಗುಗಳ ಸಮಸ್ಯೆಯ ಸುಳಿಯಲ್ಲಿ ಸಿಕ್ಕು ನಲುಗಿ ಹೋಗುತ್ತಿದ್ದಾನೆ. ಇದರಿಂದ ದೇಶದ ಅಭಿವೃದ್ಧಿಗೆ ಮಾರಕಗಳಾಗುತ್ತಿವೆ.ಆದ್ದರಿಂದ ಸಮಾಜ,ಸರ್ಕಾರ ಮುಖ್ಯವಾಗಿ ಯುವಜನಾಂಗವು ಎಚ್ಚೆತ್ತುಕೊಳ್ಳಬೆಕು.ಈ ಪಿಡುಗುಗಳಿಂದ ಆಗುತ್ತಿರುವ ಕೆಡುಕುಗಳನ್ನು ಗ್ರಹಿಸಿ ,ನಿಗ್ರಹಿಸಲು ಉದ್ಯುಕ್ತರಾಗಬೇಕು.ಹಾಗಾದಾಗ ಮಾತ್ರ ಸ್ವಸ್ಥ್ಯ ಸಮಾಜವು ನಿರ್ಮಾಣವಾಗುತ್ತದೆ.

**ಅಥವಾ**

### *–ಶಾಲಾ ಸಂಸತ್ತಿನ ಚಟುವಟಿಕೆಗಳು.*

❖ **ಪೀಠಿಕೆ :–**

ಅಬ್ರಹಾಂ ಲಿಂಕನ್ ಹೇಳಿರುವಂತೆ **"ಪ್ರಜೆಗಳಿಂದ ಪ್ರಜೆಗಳಿಗಾಗಿ ಪ್ರಜೆಗಳಿಗೋಸ್ಕರ ನಡೆಸುವ ಸರ್ಕಾರವೇ ಪ್ರಜಾಪ್ರಭುತ್ವ"** ಭಾರತವು ಒಂದು ಪ್ರಜಾಪ್ರಭುತ್ವ ಗಣರಾಜ್ಯ ರಾಷ್ಟ್ರವಾಗಿದೆ. ಇಲ್ಲಿ ಸಂಸತ್ ಮಾದರಿಯ ಸರ್ಕಾರವಿದ್ದು, ಲೋಕಸಭೆ ಮತ್ತು ರಾಜ್ಯಸಭೆ ಎಂಬ ಎರಡು ಸದನಗಳಿವೆ. ಭಾರತದಂತಹ ವಿಶಾಲವಾದ ರಾಷ್ಟ್ರದಲ್ಲಿ ಪ್ರಜೆಗಳಿಂದ ಚುನಾಯಿತರಾದ ಪ್ರಜಾಪ್ರತಿನಿಧಿಗಳಿದ್ದು, ಇಡೀ ರಾಷ್ಟ್ರದ ಏಳಿಗೆಗಾಗಿ, ಸಮಗ್ರ ಅಭಿವೃದ್ಧಿಗಾಗಿ ಶ್ರಮವಹಿಸುತ್ತಾರೆ. ಈ ಸಂದರ್ಭದಲ್ಲಿ ವಿದ್ಯಾರ್ಥಿಗಳಿಗೆ ಮತದಾನ ಮತ್ತು ಸಂಸತ್ತಿನ ಕಾರ್ಯನಿರ್ವಹಣೆಯ ಅರಿವು ಅಗತ್ಯವಾಗಿದೆ.

**ವಿಷಯ ನಿರೂಪಣೆ :–**



ಶಾಲಾ ಸಂಸತ್ ಚುನಾವಣೆ ಚುನಾವಣಾ ಆಯೋಗದ ನೀತಿ ನಿಯಮಗಳನ್ವಯ ನಡೆಯುತ್ತಿದ್ದು ಬಹಳ ವಿಶೇಷವೆನಿಸುತ್ತದೆ. **ಚುನಾವಣಾ ದಿನಾಂಕ ಘೋಷಣೆ, ನಾಮಪತ್ರ ಸಲ್ಲಿಕೆಗೆ ಗಡವು, ಹಿಂಪಡೆಯುವಿಕೆಗೆ ಅವಕಾಶ, ಚುನಾವಣಾ ಚಿಹ್ನೆ ನೀಡುವುದು, ಮತ ಪ್ರಚಾರಕ್ಕೆ ಅವಕಾಶ, ಮತದಾನ, ಫಲಿತಾಂಶ ಘೋಷಣೆ** ಹೀಗೆ ನಿಯಮಬದ್ಧವಾಗಿ ಚುನಾವಣೆ ನಡೆಸಲಾಗುತ್ತದೆ. ಬಳಿಕ ಮಂತ್ರಿಮಂಡಲ ರಚನೆ ಹಾಗೂ ಖಾತೆ ಹಂಚಿಕೆ, ಜವಾಬ್ದಾರಿ ಹಂಚಿಕೆ ನಡೆಯುತ್ತದೆ. ಶಾಲೆಗಳಲ್ಲಿ ನಡೆದ ಚುನಾವಣೆಗಳ ಅನ್ವಯ **ಆಯ್ಕೆಯಾದ ವಿದ್ಯಾರ್ಥಿಗಳಿಗೆ ಖಾತೆಗಳ ಹಂಚಿಕೆ ಮಾಡಿ ಆಯಾ ವರ್ಷದ ಶಾಲಾ ಜವಾಬ್ದಾರಿ ವಹಿಸಲಾಗುತ್ತದೆ**. **ಪ್ರಧಾನ ಮಂತ್ರಿ, ಶಿಕ್ಷಣ ಮಂತ್ರಿ, ಸ್ವಚ್ಛತಾ ಮಂತ್ರಿ, ಗ್ರಂಥಾಲಯ ಪಾಲನೆ, ರಕ್ಷಣಾ ಮಂತ್ರಿ, ಆಹಾರ ಮಂತ್ರಿ** ಹೀಗೆ ನಾನಾ ಖಾತೆಗಳನ್ನು ನೀಡಿ ಮಕ್ಕಳಿಗೆ ಜವಾಬ್ದಾರಿಯನ್ನು ನೀಡುವುದರಿಂದ ವರ್ಷವಿಡೀ ಶಾಲೆಯ ನಿರ್ವಹಣೆ ಮಾಡಲು ಶಿಕ್ಷಕರಿಗೆ ಸುಲಭವೆನಿಸುತ್ತದೆ. ಶಿಕ್ಷಣ ಇಲಾಖೆಯ ಈ ತಂತ್ರದಿಂದ **ಮಕ್ಕಳಿಗೆ ದೇಶದ ರಾಜಕೀಯ ವ್ಯವಸ್ಥೆಯ ಬಗ್ಗೆ ಪ್ರಾಯೋಗಿಕ ಅನುಭವ ಸಿಗಲಿದೆ.**

ಆಗಾಗ ಸಭಾ ಅಧ್ಯಕ್ಷರ ನೇತೃತ್ವದಲ್ಲಿ ಅಧಿವೇಶನಗಳನ್ನು ನಡೆಸುವುದು. ಶಾಲಾ ಸಮಸ್ಯೆಗಳ ಬಗ್ಗೆ ಚರ್ಚೆ ನಡೆಸುವುದು ಮತ್ತು ಅವುಗಳಿಗೆ ಪರಿಹಾರ ಕಂಡುಕೊಳ್ಳುವುದು. ಶಾಲೆಯ ವಿವಿಧ ಚಟುವಟಿಕೆಗಳಾದ **ಸಾಂಸ್ಕೃತಿಕ, ಕ್ರೀಡಾ, ಶಾಲೆ ಸ್ವಚ್ಛತೆ, ಊಟ ಇನ್ನಿತರ ಚಟುವಟಿಕೆಗಳಲ್ಲಿ ಜವಾಬ್ದಾರಿ ತೆಗೆದುಕೊಂಡು ಅದರಲ್ಲಿನ ನ್ಯೂನತೆಗಳನ್ನು ಮುಖ್ಯ ಶಿಕ್ಷಕರಿಗೆ ತೋರಿಸಿ ಚಟುವಟಿಕೆಗಳನ್ನು ಇನ್ನಷ್ಟು ಪರಿಣಾಮಕಾರಿಯಾಗಿ ಮಾಡಲು ಈ ಚುನಾವಣೆ ನಡೆಸಲು ಸಹಕಾರಿಯಾಗುತ್ತದೆ**. ಅಲ್ಲದೇ ಪಠ್ಯದಲ್ಲದ್ದನ್ನು ಪ್ರತ್ಯೇಕವಾಗಿ ತೋರಿಸಿ ಪ್ರಜಾಪ್ರಭುತ್ವದ ಬಗ್ಗೆ ಅರಿವು ಮೂಡಿಸುವುದರ ಜೊತೆಗೆ **ಮಕ್ಕಳಿಗೆ ಜವಾಬ್ದಾರಿ, ಮುಂದಾಳತ್ವ, ಎಲ್ಲರನ್ನು ಸಂಬಾಳಿಸುವ ಶಕ್ತಿಯ ವೃದ್ಧಿ** ಶಾಲಾ ಸಂಸತ್ ಚುನಾವಣೆಯ ಮುಖ್ಯ ಗುರಿಯಾಗಿದೆ.

**ಉಪಸಂಹಾರ :-**

ಶಾಲಾ ಸಂಸತ್ತಿನ ಕಾರ್ಯ ಚಟುವಟಿಕೆಗಳು ಪ್ರತೀ ಶಾಲೆಗಳಲ್ಲಿ ವರ್ಷಕೊಮ್ಮೆ ನಡೆಯುವುದರಿಂದಾಗಿ ವಿದ್ಯಾರ್ಥಿಗಳಲ್ಲಿ ರಾಜಕೀಯ ನಾಯಕತ್ವದ ಬಗ್ಗೆ ಅರಿವು ಮೂಡುತ್ತದೆ. ಹಾಗೂ ಭಾರತದ ಸಂಸತ್ತಿನ ರಚನೆಯ ಬಗೆಗಿನ ಜ್ಞಾನ ಇನ್ನಷ್ಟು ಹೆಚ್ಚವುದರ ಜೊತೆಗೆ ವಿದ್ಯಾರ್ಥಿಗಳಲ್ಲಿರುವ ಭಯವನ್ನು ಹೋಗಲಾಡಿಸುತ್ತದೆ. ಒಟ್ಟಾರೆಯಾಗಿ ಹೇಳುವುದಾದರೆ ಶಾಲಾ ಸಂಸತ್ತಿನ ರಚನೆಯ ಕಾರ್ಯ ಚಟುವಟಿಕೆಯು ಪ್ರತೀ ವಿದ್ಯಾರ್ಥಿಯಲ್ಲೂ ಚುನಾವಣೆಯಲ್ಲಿ ಭಾಗವಹಿಸುವ ಆಸೆಯನ್ನು ಹೆಚ್ಚಿಸುತ್ತದೆ ಎಂದು ಹೇಳಬಹುದು.

_____*****_____